ಸಂಪಾದಕರು: ರವಿಕುಮಾರ್ ಸಿ.ಹೆಚ್.

ಓದುಗರ ನೆಚ್ಚಿನ ಕನ್ನಡ ದಿನಪತ್ರಿಕೆ

ಸೂರ್ಯ ಪ್ರಗತಿ

SURYAPRAGATHI Kannada Daily

ಪ್ರತಿ ಸುದ್ಧಿಯ ಧ್ವನಿ

suryapragathi2021@gmail.com Mob: 9901010109 RNI:KARKAN/2021/80805 L2/RNP-1285/TMR/2025-27

Volume: 05 ಸಂಪುಟ: 05 | Issue: 246 ಸಂಚಿಕೆ: 246 | Date: 28-10-2026 Wednesday | RNI NO : KARKAN/2021/80805 | L2/RNP-1285/TMR/2025-27 | Page: 4 ಪುಟ : 4 | Price: 1.00 ಬೆಲೆ: 1.00 ರೂ

SP NEWS ಸಣ್ ಸುದ್ದಿ

ಇಂದು ಅಂತಿಮ ಮತದಾರರ ಪಟ್ಟಿ ಪ್ರಕಟ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026ರ ವೇಳಾಪಟ್ಟಿಯನ್ವಯ ಅಕ್ಟೋಬರ್ 27ರಂದು ತುಮಕೂರು ನಗರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಎಲ್ಲಾ ಮತಗಟ್ಟೆ ಕೇಂದ್ರಗಳಲ್ಲಿ ಅಂತಿಮ ಮತದಾರರ ಪಟ್ಟಿಯನ್ನು ಪ್ರಚುರಪಡಿಸಲಾಗಿದೆ ಎಂದು ತುಮಕೂರು ನಗರ ವಿಧಾನಸಭಾ ಕ್ಷೇತ್ರದ ಮತದಾರರ ನೋಂದಣಾಧಿಕಾರಿ ಹಾಗು ಪಾಲಿಕೆ ಆಯುಕ್ತೆ ಶುಭ ಬಿ. ತಿಳಿಸಿದ್ದಾರೆ. ಸಾರ್ವಜನಿಕರು ಅಂತಿಮ ಮತದಾರರ ಪಟ್ಟಿಯಲ್ಲಿನ ತಮ್ಮ ನೋಂದಣಿ ಮಾಹಿತಿಯನ್ನು ಎಲ್ಲಾ ಮತಗಟ್ಟೆ ಕೇಂದ್ರ ಅಥವಾ ತುಮಕೂರು ಮಹಾನಗರಪಾಲಿಕೆಯ ಸೂಚನಾ ಫಲಕದಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ. ಹೆಚ್ಚಿನ ಮಾಹಿತಿಯನ್ನು ವೆಬ್‌ಸೈಟ್ https://ceo.karnataka.gov.in/ನಲ್ಲಿ ಪರಿಶೀಲಿಸಿಕೊಳ್ಳಬಹುದಾಗಿದೆ ಎಂದು ಅವರು ತಿಳಿಸಿದ್ದಾರೆ.

2027ರ ಜನವರಿಯಲ್ಲಿ TP/ZP ಚುನಾವಣೆ ಸಾಧ್ಯತೆ



ಸೂರ್ಯಪ್ರಗತಿನ್ಯೂಸ್.ಕಾಂ

ಕರ್ನಾಟಕದಲ್ಲಿ ಬಹು ದಿನಗಳಿಂದ ಬಾಕಿ ಉಳಿದಿರುವ ಜಿಲ್ಲಾ ಪಂಚಾಯತ್ (ಜಿ.ಪಂ.) ಮತ್ತು ತಾಲೂಕು ಪಂಚಾಯತ್ (ತಾ.ಪಂ.) ಚುನಾವಣೆಗಳು 2027ರ ಜನವರಿ ಮೊದಲ ಅಥವಾ ಎರಡನೇ ವಾರದಲ್ಲಿ ನಡೆಯುವ ಸಾಧ್ಯತೆ ದಟ್ಟವಾಗಿದೆ. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವ ಈಶ್ವರ ಖಂಡ್ರೆ ಅವರು ಶಿವಮೊಗ್ಗದಲ್ಲಿ ಈ ಕುರಿತು ಪ್ರಮುಖ ಮಾಹಿತಿ ನೀಡಿದ್ದು, ರಾಜ್ಯ ಸರ್ಕಾರ ಈಗಾಗಲೇ ಚುನಾವಣೆ ನಡೆಸಲು ಕ್ಯಾಬಿನೆಟ್‌ನಲ್ಲಿ ತೀರ್ಮಾನ ಕೈಗೊಂಡಿದೆ ಎಂದು ತಿಳಿಸಿದ್ದಾರೆ.

ಚುನಾವಣಾ ಸಿದ್ಧತೆಗಳ ಪ್ರಮುಖ ಮುಖ್ಯಾಂಶಗಳು

ವೇಳಾಪಟ್ಟಿ ಬಿಡುಗಡೆ: ಡಿಸೆಂಬರ್ 2ನೇ ವಾರದಲ್ಲಿ ಚುನಾವಣಾ ಆಯೋಗದಿಂದ ಅಧಿಕೃತ ಚುನಾವಣಾ ವೇಳಾಪಟ್ಟಿ ಪ್ರಕಟವಾಗುವ ನಿರೀಕ್ಷೆಯಿದೆ.

ಮತದಾನದ ಅವಧಿ: ಜನವರಿ 10 ಅಥವಾ 15ರ ಒಳಗಾಗಿ ಮತದಾನ ಪ್ರಕ್ರಿಯೆಗಳನ್ನು ಪೂರ್ಣಗೊಳಿಸಲು ಸರ್ಕಾರ ಚಿಂತನೆ ನಡೆಸಿದೆ.

ಇವಿಎಂ ಬದಲು ಬ್ಯಾಲೆಟ್ ಬಾಕ್ಸ್: ಈ ಬಾರಿಯ ಗ್ರಾಮೀಣ ಸ್ಥಳೀಯ ಸಂಸ್ಥೆಗಳ ಚುನಾವಣೆಗೆ ಎಲೆಕ್ಟ್ರಾನಿಕ್ ವೋಟಿಂಗ್ ಮೆಷಿನ್ (ಇಗಿಬ) ಬದಲಾಗಿ ಬ್ಯಾಲೆಟ್ ಪೇಪರ್ (ಮತಪತ್ರ) ಬಳಸಲು ಪಂಚಾಯತ್ ರಾಜ್ ಕಾಯ್ದೆಗೆ ತಿದ್ದುಪಡಿ ತರಲಾಗಿದೆ.

ಮೀಸಲಾತಿ ಪ್ರಕ್ರಿಯೆ: ರಾಜ್ಯದ 31 ಜಿಲ್ಲಾ ಪಂಚಾಯಿತಿಗಳ ಒಟ್ಟು 1,129 ಸ್ಥಾನಗಳಿಗೆ ಈಗಾಗಲೇ ಪ್ರಾಥಮಿಕ ಮೀಸಲಾತಿ ಪಟ್ಟಿ ಬಿಡುಗಡೆ ಮಾಡಲಾಗಿದ್ದು, ಬಂದಿರುವ ಸುಮಾರು 1,800 ಆಕ್ಷೇಪಣೆಗಳನ್ನು ಪರಿಶೀಲಿಸಿ ಅಕ್ಟೋಬರ್ ಅಂತ್ಯದೊಳಗೆ ಅಂತಿಮ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗಕ್ಕೆ ಸಲ್ಲಿಸಲಾಗುತ್ತದೆ.

ಮಹಿಳಾ ಪ್ರಾತಿನಿಧ್ಯ: ಒಟ್ಟು 1,129 ಜಿ.ಪಂ ಸ್ಥಾನಗಳ ಪೈಕಿ ಅರ್ಧಕ್ಕಿಂತ ಹೆಚ್ಚು, ಅಂದರೆ 571 ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಲಾಗಿದೆ.

ಚುನಾವಣೆಯ ಹಂತಗಳು:

ಸರ್ಕಾರದ ಸದ್ಯದ ಯೋಜನೆಯ ಪ್ರಕಾರ, ಮೊದಲು ಜಿಲ್ಲಾ ಮತ್ತು ತಾಲೂಕು ಪಂಚಾಯತ್ ಚುನಾವಣೆಗಳನ್ನು ನಡೆಸಿ, ಆ ಬಳಿಕ ಗ್ರಾಮಾಂತರ ಮಟ್ಟದಲ್ಲಿ ಗ್ರಾಮ ಪಂಚಾಯತ್ ಚುನಾವಣೆಗಳನ್ನು ನಡೆಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಆದಿ ಚುಂಚನಗಿರಿ ಶ್ರೀ ಗಳ ಭೇಟಿ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ಆದಿಚುಂಚನ ಗಿರಿ ಮಹಾ ಸಂಸ್ಥಾನದ ಡಾ. ನಿರ್ಮಲಾ ನಂದನಾಥ ಸ್ವಾಮೀಜಿ ಇತ್ತೀಚೆಗೆ ತಿಪಟೂರಿನ ವೈದ್ಯ ಡಾ.ಜಿ.ಬಿ. ವಿವೇಚನ್ ಅವರ ನಿವಾಸಕ್ಕೆ ಭೇಟಿ ನೀಡಿದ್ದರು. ವೈದ್ಯರ ತಂದೆ ಜಿ.ಬಿ.ಬಸವೇಗೌಡರನ್ನು ಸ್ವಾಮೀಜಿ ಸನ್ಮಾನಿಸಿ ಆಶೀರ್ವದಿಸಿದರು.

ಸೂರ್ಯ ಪ್ರಗತಿ
ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ
ಸಂಪರ್ಕಿಸಿ: 9901010109

ಅಂತಿಮ ಮತದಾರರ ಪಟ್ಟಿ ಪ್ರಕಟ : ಜಿಲ್ಲೆಯಲ್ಲಿ 20.94ಲಕ್ಷ ಮತದಾರರು

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಭಾರತ ಚುನಾವಣಾ ಆಯೋಗದ ನಿರ್ದೇಶನದಂತೆ ಮತದಾರರ ಪಟ್ಟಿ ವಿಶೇಷ ಸಮಗ್ರ ಪರಿಷ್ಕರಣೆ–2026 (SIR–2026) ಪ್ರಕ್ರಿಯೆಯಡಿ ಜಿಲ್ಲೆಯ ಅಂತಿಮ ಮತದಾರರ ಪಟ್ಟಿಯನ್ನು ಅಕ್ಟೋಬರ್ 27ರಂದು ಪ್ರಕಟಿಸಲಾಗಿದ್ದು, ಅಂತಿಮ ಮತದಾರರ ಪಟ್ಟಿಯಲ್ಲಿ ಜಿಲ್ಲೆಯ 11 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 20,94,762 ಮತದಾರರಿದ್ದಾರೆ ಎಂದು ಅಪರ ಜಿಲ್ಲಾ ಚುನಾವಣಾಧಿಕಾರಿ ಹಾಗೂ ಅಪರ ಜಿಲ್ಲಾಧಿಕಾರಿ ಡಾ: ಎನ್. ತಿಪ್ಪೇಸ್ವಾಮಿ ತಿಳಿಸಿದರು.

ಜಿಲ್ಲಾಧಿಕಾರಿಗಳ ಕಚೇರಿಯಲ್ಲಿಂದು ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳ ಸಭೆ ನಡೆಸಿ ಮಾತನಾಡಿದ ಅವರು, ಮತದಾರರ ಪಟ್ಟಿಯನ್ನು ಸಾರ್ವಜನಿಕರ ಮಾಹಿತಿಗಾಗಿ ಜಿಲ್ಲೆಯ ಎಲ್ಲಾ ತಾಲ್ಲೂಕು ಕಚೇರಿ, ಉಪ ವಿಭಾಗಾಧಿಕಾರಿಗಳ ಕಚೇರಿ, ಜಿಲ್ಲಾಧಿಕಾರಿಗಳ ಕಚೇರಿಯ ಎನ್‌ಐಸಿ ವೆಬ್‌ಸೈಟ್ ಹಾಗೂ ಮುಖ್ಯ ಚುನಾವಣಾಧಿಕಾರಿಗಳ ವೆಬ್‌ಸೈಟ್‌ನಲ್ಲಿ ಪ್ರಚುರಪಡಿಸಲಾಗಿದೆ. ಅಂತಿಮ ಮತದಾರರ ಪಟ್ಟಿಯಲ್ಲಿ ಯಾವುದೇ ನ್ಯೂನತೆಗಳಿದ್ದಲ್ಲಿ, ಹೆಸರು ಬಿಟ್ಟು ಹೋಗಿದ್ದರೆ, ತಿದ್ದುಪಡಿಗಳಿದ್ದಲ್ಲಿ ನಿರಂತರ ಪರಿಷ್ಕರಣೆಯಡಿ ನಿಗದಿತ ನಮೂನೆ–6, 7 ಮತ್ತು 8ರಲ್ಲಿ ಆನ್‌ಲೈನ್ ಮತ್ತು ಆಫ್‌ಲೈನ್ ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ಅಂತಿಮ ಮತದಾರರ ಪಟ್ಟಿಯಲ್ಲಿ 10,36,724 ಪುರುಷ, 10,57,981 ಮಹಿಳೆಯರು ಹಾಗೂ 57 ತೃತೀಯ ಲಿಂಗಿ ಮತದಾರರು ಸೇರಿದಂತೆ ಒಟ್ಟು 20,94,762 ಮತದಾರರಿದ್ದು, 18–19 ವರ್ಷದೊಳಗಿನ 15,754 ಪುರುಷರು, 14,543 ಮಹಿಳೆಯರು ಹಾಗೂ 4 ತೃತೀಯ ಲಿಂಗಿ ಮತದಾರರು ಸೇರಿದಂತೆ ಒಟ್ಟು 30,301 ಯುವ ಮತದಾರರು ಈ ಪಟ್ಟಿಗೆ ಸೇರ್ಪಡೆಯಾಗಿದ್ದಾರೆ ಎಂದು ತಿಳಿಸಿದರು.

ಜಿಲ್ಲೆಯಲ್ಲಿ ನಮೂನೆ–7ರಂತೆ ಮತದಾರರ ಪಟ್ಟಿಯಿಂದ 7,248 ಮತದಾರರನ್ನು ಕೈಬಿಡಲಾಗಿದ್ದು, ಈ ಪೈಕಿ 162 ಮರಣ ಹೊಂದಿದ, 25 ಗೈರು, 63 ಈಗಾಗಲೇ ನೋಂದಣಿಯಾದ, 4777 ಸ್ಥಳಾಂತರಗೊಂಡ ಹಾಗೂ 2221 ಇತರೆ ಸೇರಿದಂತೆ ಒಟ್ಟು 7,248 ಮತದಾರರನ್ನು ಕೈಬಿಡಲಾಗಿದೆ ಎಂದು ಮಾಹಿತಿ ನೀಡಿದರು.

ಸಭೆಯಲ್ಲಿ ಮಾನ್ಯತೆ ಪಡೆದ ರಾಷ್ಟ್ರ ಹಾಗೂ ರಾಜ್ಯ ರಾಜಕೀಯ ಪಕ್ಷಗಳ ಪದಾಧಿಕಾರಿಗಳಿಗೆ ಜಿಲ್ಲೆಯ ಎಲ್ಲಾ ವಿಧಾನಸಭಾ ಕ್ಷೇತ್ರಗಳ ಅಂತಿಮ ಮತದಾರರ ಪಟ್ಟಿಯ ಹಾರ್ಡ್ ಕಾಪಿ ಮತ್ತು ಸಾಫ್ಟ್ ಕಾಪಿಯನ್ನು ವಿತರಿಸಲಾಯಿತು.

ಸಾರ್ವಜನಿಕರು ಸಂಬಂಧಿಸಿದ ಮತಗಟ್ಟೆಗಳಲ್ಲಿ ಪ್ರಕಟಿಸಿರುವ ಅಂತಿಮ ಮತದಾರರ ಪಟ್ಟಿಯನ್ನು ಪರಿಶೀಲಿಸಿಕೊಳ್ಳಬೇಕು. ಪಟ್ಟಿಯಲ್ಲಿ ಯಾವುದೇ ನ್ಯೂನತೆಗಳು ಕಂಡು ಬಂದಲ್ಲಿ ನಿಗದಿತ ನಮೂನೆಯಲ್ಲಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಆನ್‌ಲೈನ್ https://voters.eci.gov.in ಅಥವಾ Voter Helpline App(VHA) ಮೂಲಕ ಅಥವಾ ಆಫ್‌ಲೈನ್ ಮೂಲಕ ಸಂಬಂಧಪಟ್ಟ ಮತಗಟ್ಟೆ ಮಟ್ಟದ ಅಧಿಕಾರಿ (BLO) ಗಳಿಗೆ ಸಲ್ಲಿಸಲು ಅವಕಾಶವಿದ್ದು, ಸದುಪಯೋಗ ಪಡಿಸಿಕೊಳ್ಳಬೇಕೆಂದು ಅವರು ತಿಳಿಸಿದರು. ಸಭೆಯಲ್ಲಿ ಮಾನ್ಯತೆ ಪಡೆದ ರಾಷ್ಟ್ರೀಯ ಮತ್ತು ರಾಜ್ಯ ರಾಜಕೀಯ ಪಕ್ಷಗಳ ಪ್ರತಿನಿಧಿಗಳು, ಚುನಾವಣಾ ಶಾಖೆಯ ನಾಗಭೂಷಣ್ ಸೇರಿದಂತೆ ಮತ್ತಿತರರು ಹಾಜರಿದ್ದರು.

MLC ಚುನಾವಣೆ: 4 ಸ್ಥಾನ NDA ತೆಕ್ಕೆಗೆ; ಕಾಂಗ್ರೆಸ್ ಗೆ ಮುಖಭಂಗ

ಸೂರ್ಯಪ್ರಗತಿನ್ಯೂಸ್.ಕಾಂ



ಬೆಂಗಳೂರು: ವಿಧಾನ ಪರಿಷತ್ತಿನ 2 ಪದವೀಧರರ ಕ್ಷೇತ್ರ, 2 ಶಿಕ್ಷಕರ ಕ್ಷೇತ್ರ ಸೇರಿ ಒಟ್ಟು 4 ಕ್ಷೇತ್ರಗಳ ಚುನಾವಣೆ ಫಲಿತಾಂಶ ಇದೀಗ ಹೊರಬಿದ್ದಿದೆ. ಪಶ್ಚಿಮ ಪದವೀಧರರ ಕ್ಷೇತ್ರದ ಎಣಿಕೆ ಧಾರವಾಡದಲ್ಲಿ, ಈಶಾನ್ಯ ಶಿಕ್ಷಕರ ಕ್ಷೇತ್ರದ ಎಣಿಕೆ ಕಲಬುರಗಿಯಲ್ಲಿ ಹಾಗೂ ಬೆಂಗಳೂರು ಶಿಕ್ಷಕರ ಕ್ಷೇತ್ರ ಮತ್ತು ಆಗ್ನೇಯ ಪದವೀಧರರ ಕ್ಷೇತ್ರದ ಮತ ಎಣಿಕೆ ಬೆಂಗಳೂರಿನಲ್ಲೇ ನಡೆಯಿತು. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿ ಎಪಿ ರಂಗನಾಥ್ ಜಯಭೇರಿ ಬಾರಿಸಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣಗೆ ಸೋಲಾಗಿದೆ.

ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಮೈತ್ರಿ ಅಭ್ಯರ್ಥಿಗೆ ಗೆಲುವು


ಬೆಂಗಳೂರು ಶಿಕ್ಷಕರ ಕ್ಷೇತ್ರದ ಬಿಜೆಪಿ–ಜೆಡಿಎಸ್ (ಎನ್‌ಡಿಎ) ಮೈತ್ರಿ ಅಭ್ಯರ್ಥಿಯಾಗಿ ಎ.ಪಿ. ರಂಗನಾಥ್ ಮತ್ತು ಕಾಂಗ್ರೆಸ್ ಅಭ್ಯರ್ಥಿಯಾಗಿ ಪುಟ್ಟಣ್ಣ ಕಣಕ್ಕಿಳಿದಿದ್ದರು. ಆದರೆ ಈ ಚುನಾವಣೆಯಲ್ಲಿ ಮೈತ್ರಿ ಅಭ್ಯರ್ಥಿ ಎಪಿ ರಂಗನಾಥ್ ಗೆದ್ದಿದ್ದು, ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣಗೆ ಸೋಲಾಗಿದೆ. ರಂಗನಾಥ್ 10810 ಮತಗಳನ್ನು ಪಡೆದಿದ್ದು, 908 ಮತಗಳಿಂದ ಪುಟ್ಟಣ್ಣ ವಿರುದ್ಧ ಗೆಲುವಾಗಿದೆ.

ಬಿಜೆಪಿ–ಜೆಡಿಎಸ್ ಕಾರ್ಯಕರ್ತರಿಂದ ಸಂಭ್ರಮಾಚರಣೆ

ಇನ್ನು ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಎನ್‌ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ ಗೆಲುವಿಗೆ ಜೆಡಿಎಸ್ ಹಾಗೂ ಬಿಜೆಪಿ ಕಾರ್ಯಕರ್ತರು ಸಂಭ್ರಮಿಸಿದ್ದಾರೆ. ರಾಮನಗರದ ಐಜೂರು ವೃತ್ತದಲ್ಲಿ ಮೈತ್ರಿ ಕಾರ್ಯಕರ್ತರ ವಿಜಯೋತ್ಸವ ಆಚರಿಸಿದ್ರು. ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮ ವ್ಯಕ್ತಪಡಿಸಿದ್ರು. ಪರಿಷತ್ ಚುನಾವಣೆ ಮುಂದಿನ ಚುನಾವಣೆಯ ದಿಕ್ಸೂಚಿ ಎಂದು ಘೋಷಣೆ ಕೂಗಿದರು.

ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲಿ ಬಿಜೆಪಿಗೆ ಗೆಲುವು

ಅತ್ತ ಈಶಾನ್ಯ ಶಿಕ್ಷಕರ ಕ್ಷೇತ್ರದಲ್ಲೂ ಬಿಜೆಪಿ ಅಭ್ಯರ್ಥಿಗೆ ಗೆಲುವಾಗಿದ್ದು, ಕಾಂಗ್ರೆಸ್ ಅಭ್ಯರ್ಥಿಗೆ ಸೋಲಾಗಿದೆ. ಬಿಜೆಪಿಯ ಶಶೀಲ್ ಜಿ. ನಮೋಶಿ ಗೆದ್ದು ಬೀಗಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಶರಣಪ್ಪ ಮಟ್ಟೂರಿಗೆ ಭಾರೀ ಮುಖಭಂಗವಾಗಿದೆ. ಆಗ್ನೇಯ ಪದವೀಧರರ ಕ್ಷೇತ್ರದಲ್ಲಿ ಬಿಜೆಪಿ ಅಭ್ಯರ್ಥಿಯಾಗಿ ಕೆ.ಎಂ. ಸುರೇಶ್ ಹಾಗೂ ಕಾಂಗ್ರೆಸ್ ಅಭ್ಯರ್ಥಿ ಶಶಿ ಹುಲಿಕುಂಟೆಮಠಗೂ ಸೋಲಾಗಿದೆ. ಅತ್ತ ಪಶ್ಚಿಮ ಪದವೀಧರರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ವಿ. ಸಂಕನೂರು, ಕಾಂಗ್ರೆಸ್ ಅಭ್ಯರ್ಥಿ ಮೋಹನ್ ಲಿಂಬಿಕಾಯಿ ಸೋಲಾಗಿದೆ.



ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಚಿ.ನಾ.ಹಳ್ಳಿಯಲ್ಲಿ 2,08,303 ಮತದಾರರು

ಸೂರ್ಯಪ್ರಗತಿನ್ಯೂಸ್.ಕಾಂ

ಚಿಕ್ಕನಾಯಕನಹಳ್ಳಿ: ತಾಲ್ಲೂಕಿನಲ್ಲಿ ಒಟ್ಟು 2,08,303 ಮತದಾರರಲ್ಲಿ 1,03,003 ಪುರುಷರು, 1,05,299 ಮಹಿಳೆಯರು ಹಾಗೂ 1 ಇತರೆ ಮತದಾರರಿದ್ದಾರೆ ಎಂದು ಚುನಾವಣಾ ನೋಂದಣಾಧಿಕಾರಿ ಹಾಗೂ ಉಪವಿಭಾಗಾಧಿಕಾರಿ ಸಪ್ತಶ್ರೀ ತಿಳಿಸಿದರು.ಪಟ್ಟಣದ ತಾಲ್ಲೂಕು ಕಚೇರಿ ನ್ಯಾಯಾಲಯ ಸಭಾಂಗಣದಲ್ಲಿ ಮಂಗಳವಾರ ಮತದಾರರ ಪಟ್ಟಿ ಪ್ರಕಟಣೆ ಸಂಬಂಧ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.ಒಟ್ಟು 2,91,291 ಜನಸಂಖ್ಯೆಯಲ್ಲಿ 2,08,303 ಮತದಾರರಿದ್ದು, ಇದು ಶೇಕಡ 71.51 ರಷ್ಟು ಮತದಾರರ ಅನುಪಾತವನ್ನು ಹೊಂದಿದೆ.ಹಿರಿಯ ನಾಗರಿಕರು 2455,ಹೊಸ ಮತದಾರರು 3098 ಹಾಗೂ ಅಂಗವಿಕಲ ಮತದಾರರು 3403 ಇದ್ದಾರೆ.ಅಲ್ಲದೆ, ಸರಾಸರಿ ಪ್ರತಿ 1,000 ಪುರುಷರಿಗೆ 1,022 ಮಹಿಳೆಯರ ಲಿಂಗಾನುಪಾತವಿದೆ ಎಂದರು.

ತಾಲ್ಲೂಕಿನಲ್ಲಿ ಹಿಂದೆ 260 ಮತಗಟ್ಟೆಗಳು ಇದ್ದವು, ಪ್ರಸ್ತುತ ಅವುಗಳ ಸಂಖ್ಯೆಯನ್ನು 270 ಕ್ಕೆ ಹೆಚ್ಚಿಸಲಾಗಿದೆ. ಮತ್ತು ಎಸ್‌ಐಆರ್ ಸಮಯದಲ್ಲಿ 6778 ಮತದಾರರಿಗೆ ನೋಟಿಸ್ ಜಾರಿ ಮಾಡಲಾಗಿದ್ದು 118 ಮತದಾರರನ್ನು ನಿಯಮಾನುಸಾರ ಅನರ್ಹಗೊಳಿಸಲಾಗಿದೆ. ತಹಶೀಲ್ದಾರ್ ಮಮತಾ ಎಂ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿಡಿ ಚಂದ್ರಶೇಖರ್, ಮಿಲಿಟರಿ ಶಿವಣ್ಣ, ಕುಮಾರ್ ಇದ್ದರು.

ನಗರ ಸಾರಿಗೆ ಬಸ್‌ಗಳಲ್ಲಿ ‘ಸಿದ್ಧಗಂಗಾ’ ಹೆಸರು ನಾಪತ್ತೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ಪ್ರಯಾಣಿಕರ ಅನುಕೂಲಕ್ಕಾಗಿ ಸುಮಾರು ಕಳೆದ 15 ವರ್ಷಗಳ ಹಿಂದೆ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯು ತುಮಕೂರು ನಗರ ವ್ಯಾಪ್ತಿಯಲ್ಲಿ ಆರಂಭಿಸಿದ್ದ ‘ಸಿದ್ಧಗಂಗಾ ನಗರ ಸಾರಿಗೆ’ ಹೆಸರಿನ ನಗರ ಸಾರಿಗೆ ಬಸ್‌ಗಳ ಮೇಲಿದ್ದ ‘ಸಿದ್ಧಗಂಗಾ’ ಹೆಸರು ನಾಪತ್ತೆಯಾಗಿದೆಎಂದುರಾಷ್ಟ್ರೀಯ ಮಾನವ ಪರಿಸರ ಸಂರಕ್ಷಣಾ ಪಡೆಅಧ್ಯಕ್ಷ ಜಿ.ಎಸ್. ಬಸವರಾಜು ಹೇಳಿದ್ದಾರೆ.


ಸಿದ್ಧಗಂಗಾ ನಗರ ಸಾರಿಗೆಇಲ್ಲಿಯವರೆಗೂ ಲಾಭದಾಯಕವಾಗಿಯೇ ನಗರ ಸಾರಿಗೆ ಸಂಸ್ಥೆ ನಡೆದುಕೊಂಡು ಬಂದಿದೆ.ಆದರೆಇತ್ತೀಚಿನ ದಿನಗಳಲ್ಲಿ ಸಾಕಷ್ಟು ನಗರ ಸಾರಿಗೆ ಬಸ್ಸುಗಳ ಮೇಲೆ ಸಿದ್ಧಗಂಗಾ ಹೆಸರನ್ನ ತೆರವುಗೊಳಿಸಲಾಗಿದೆ.ಸಾರಿಗೆ ಸಂಸ್ಥೆಯ ಈ ನಡೆಯನ್ನು ನಮ್ಮ ಸಂಸ್ಥೆ ಉಗ್ರವಾಗಿಖಂಡಿಸುತ್ತಿದೆಎಂದು ತಿಳಿಸಿದ್ದಾರೆ.

ಅಧಿಕೃತಡಾ.ಶಿವಕುಮಾರ ಸ್ವಾಮೀಜಿರಸ್ತೆಯ ಹೆಸರನ್ನು ಜಿಲ್ಲಾಡಳಿತ, ಆಡಳಿತಾತ್ಮಕವಾಗಿ, ಅಧಿಕೃತವಾಗಿ ದಾಖಲೆಗಳಲ್ಲಿ ಬಳಸದೆ ನಿರ್ಲಕ್ಷಿಸಿರುವ ಸಂದರ್ಭದಲ್ಲಿ, ಡಾ. ಶಿವಕುಮಾರ ಸ್ವಾಮೀಜಿ ವೃತ್ತದಲ್ಲಿ ನಡೆಯುತ್ತಿರುವಕಾಮಗಾರಿಗೆ ‘ಶ್ರೀ ಶಿವಕುಮಾರ ಸ್ವಾಮೀಜಿ ಸ್ಕ್ವೇರ್’ಅಂತ ಹೆಸರನ್ನುಇಡಲೇಬೇಕೆಂದು ಹೋರಾಟಗಳು ಆರಂಭವಾಗಿರುವ ಸಂದರ್ಭದಲ್ಲಿ ನಗರ ಸಾರಿಗೆ ಬಸ್‌ಗಳ ಮೇಲೆ ‘ಸಿದ್ಧಗಂಗಾ’ ಹೆಸರು ಕೈಬಿಟ್ಟಿರುವುದರ ಹಿಂದೆ ಪ್ರಭಾವಿ ಹಾಗೂ ಕಾಣದ ಕೈಗಳು ಕೆಲಸ ಮಾಡಿರುವ ಅನುಮಾನಗಳಿವೆ ಎಂದು ಜಿ.ಎಸ್. ಬಸವರಾಜು ಹೇಳಿದ್ದಾರೆ.

ತುಮಕೂರಿನವರೇ ಆದ ಗುಬ್ಬಿ ಕ್ಷೇತ್ರದ ಶಾಸಕ ಎಸ್.ಆರ್.ಶ್ರೀನಿವಾಸ್ ಅವರು ಸಾರಿಗೆ ಸಂಸ್ಥೆಯ ಅಧ್ಯಕ್ಷರಾಗಿದ್ದು ತುರ್ತಾಗಿ ಈ ಬಗ್ಗೆ ಗಮನಹರಿಸಿ ಆಗಿರುವಂತಹ ಲೋಪವನ್ನು ಸರಿಪಡಿಸಬೇಕೆಂದು ಒತ್ತಾಯಿಸಿದ್ದಾರೆ. ರಾಜ್ಯ ಮಾತ್ರವಲ್ಲದೆ ದೇಶದ ಉದ್ದಗಲದಲ್ಲಿ ‘ಸಿದ್ಧಗಂಗಾ’ ಹೆಸರಿಗೆನಸ್ತಕರಾಗಿ, ಗೌರವ ಪೂರ್ಣವಾಗಿ, ಧನ್ಯತಾಭಾವದಿಂದ ಕೋಟ್ಯಾಂತರ ಆಸ್ತಿಕ ಬಂಧುಗಳು ನಡೆದು ಕೊಳ್ಳುತ್ತಿರುವ ಸಂದರ್ಭದಲ್ಲಿ, ಪೂಜ್ಯರ ಕರ್ಮಭೂಮಿ, ಸ್ವಕ್ಷೇತ್ರದಲ್ಲಿಯೇ ರಾಜ್ಯ ಸಾರಿಗೆ ಸಂಸ್ಥೆಯಿಂದ ಇಂತಹ ಅಪಮಾನ ಹಾಗೂ ಅಪಚಾರ ಸಹಿಸುವುದು ಸಾಧ್ಯವೇ ಇಲ್ಲ. ಸಾರಿಗೆ ಸಂಸ್ಥೆ ಎಚ್ಚೆತ್ತು ಕೊಂಡು ಆಗಿರುವ ಲೋಪವನ್ನು ಸರಿಪಡಿಸಿ, ‘ಸಿದ್ಧಗಂಗಾ’ ಹೆಸರಿಗೆಯಾವುದೇಚ್ಯುತಿ ಬಾರದಂತೆ, ಗೌರವ ಪೂರ್ವಕವಾಗಿ ನಡೆದುಕೊಳ್ಳದೆ ಹೋದರೆ ಸಾರಿಗೆ ಸಂಸ್ಥೆಗೆ ಘರಾವ್ ಹಾಕುವುದು ಅನಿವಾರ್ಯಎಂದು ಹೇಳಿದ್ದಾರೆ.

ಸಂಪಾದಕ ಮಂಜುನಾಥ್‌ಗೆ ನೀಡಿದ ಪೊಲೀಸ್ ನೋಟಿಸ್ ಹಿಂಪಡೆಯಲು ಮನವಿ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಗರದ ಶ್ರೀ ಶಿವಕುಮಾರ ಸ್ವಾಮೀಜಿ ವೃತ್ತಕ್ಕೆ ‘ತುಮಕೂರು ಸ್ಕ್ವೇರ್’ ಎಂದು ಹೆಸರು ಬದಲಾಯಿಸುವ ಜಿಲ್ಲಾಡಳಿತದ ನಿರ್ಧಾರದ ಕುರಿತು ಸಾರ್ವಜನಿಕರ ಅಭಿಪ್ರಾಯ ಸಂಗ್ರಹಿಸಲು ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಪ್ರಕಟಿಸಿದ್ದ ಟಿಎಂ ಫಸ್ಟ್ ನ್ಯೂಸ್ ಡಿಜಿಟಲ್ ಮಾಧ್ಯಮದ ಸಂಪಾದಕ ಪಿ.ಎನ್. ಮಂಜುನಾಥ್ ಗೌಡ ಅವರಿಗೆ ಪೊಲೀಸ್ ಇಲಾಖೆ ನೋಟಿಸ್ ನೀಡಿರುವುದನ್ನು ವಿರೋಧಿಸಿ ನೋಟಿಸ್ ಹಿಂಪಡೆಯುವಂತೆ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘ ಹಾಗೂ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ ಜಿಲ್ಲಾ ಘಟಕದಿಂದ ಎಸ್ಪಿ ಕಚೇರಿಗೆ ನಿಯೋಗ ತೆರಳಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್ ಅವರಿಗೆ ಮನವಿ ಮಾಡಿದರು.

ಸಾರ್ವಜನಿಕ ವಿಚಾರಗಳ ಕುರಿತು ಜನಾಭಿಪ್ರಾಯ ಸಂಗ್ರಹಿಸುವುದು ಮಾಧ್ಯಮಗಳ ಪ್ರಮುಖ ಜವಾಬ್ದಾರಿಯಾಗಿದೆ. ಈ ಹಿನ್ನೆಲೆಯಲ್ಲಿ ಪತ್ರಕರ್ತ ಮಂಜುನಾಥ್ ಗೌಡ ಅವರಿಗೆ ನೀಡಿರುವ ನೋಟಿಸ್ ಕುರಿತು ಸಂಘಟನೆಗಳ ಪ್ರತಿನಿಧಿಗಳು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳ ಗಮನ ಸೆಳೆದು, ನೋಟಿಸ್ ಹಿಂಪಡೆಯುವಂತೆ ಮನವಿ ಸಲ್ಲಿಸಿದರು. ಮನವಿ ಸ್ವೀಕರಿಸಿ ಪ್ರತಿಕ್ರಿಯಿಸಿದ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ವಿ.ಅಶೋಕ್, ಪತ್ರಕರ್ತರು ಹಾಗೂ ಪೊಲೀಸರು ಸಾರ್ವಜನಿಕವಾಗಿ ಕರ್ತವ್ಯ ನಿರ್ವಹಿಸುವ ಸಂದರ್ಭದಲ್ಲಿ ಇಂತಹ ಸನ್ನಿವೇಶಗಳು ಎದುರಾಗುತ್ತವೆ. ಸಾಮಾಜಿಕ ಜಾಲತಾಣದಲ್ಲಿ ಪ್ರಕಟಿಸಿರುವ ವಿಷಯದ ಕುರಿತು ಮಾಹಿತಿ ಪಡೆಯುವ ಉದ್ದೇಶದಿಂದ ನೋಟಿಸ್ ನೀಡಲಾಗಿದೆ. ಪ್ರಕರಣವನ್ನು ಹಿಂಪಡೆಯುವ ಕುರಿತು ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು.

ಈ ಸಂದರ್ಭದಲ್ಲಿ ಕಾರ್ಯನಿರತ ದಿನಪತ್ರಿಕೆಗಳ ಸಂಪಾದಕರ ಸಂಘದ ರಾಜ್ಯ ಪ್ರಧಾನ ಕಾರ್ಯದರ್ಶಿ ಟಿ.ಎಸ್.ಕೃಷ್ಣಮೂರ್ತಿ, ಜಿಲ್ಲಾಧ್ಯಕ್ಷ ಸಿ. ಕರುಣಾಕರ್, ಜಂಟಿ ಕಾರ್ಯದರ್ಶಿ ಸಿ. ರಂಗನಾಥ್, ಜಿಲ್ಲಾ ಉಪಾಧ್ಯಕ್ಷ ಪಿ.ಎಸ್. ಮಲ್ಲಿಕಾರ್ಜುನಸ್ವಾಮಿ, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪಿ.ಎನ್.ಮಂಜುನಾಥ್ ಗೌಡ, ಸಂಘಟನಾ ಕಾರ್ಯದರ್ಶಿ ಸಿ.ಎನ್. ಮಹೇಶ್ ಕುಮಾರ್, ಕೆಯುಡಬ್ಲ್ಯುಜೆ ರಾಜ್ಯ ಸಮಿತಿ ಸದಸ್ಯ ಚಿ.ನಿ. ಪುರುಷೋತ್ತಮ್, ಜಿಲ್ಲಾಧ್ಯಕ್ಷ ಎಲ್. ಯೋಗೀಶ್, ಪ್ರಧಾನ ಕಾರ್ಯದರ್ಶಿ ಟಿ.ಇ. ರಘುರಾಮ್, ಉಪಾಧ್ಯಕ್ಷ ಜಯಣ್ಣ, ನಿರ್ದೇಶಕರಾದ ಜಗನ್ನಾಥ ಕಾಳೇನಹಳ್ಳಿ, ಜಯಣ್ಣ ಬೆಳೆಗೆರೆ, ಸುರೇಶ್ ವತ್ಸ, ಪತ್ರಕರ್ತರಾದ ಶ್ರೀಹರ್ಷ, ಕುಚ್ಚಂಗಿ ಪ್ರಸನ್ನ, ಎಸ್.ಹರೀಶ್ ಆಚಾರ್ಯ, ವಾಗೀಶ್, ಸಂತೋಷ್ ಎಂ.ಕೆ., ರಾಕೇಶ್ ಗುಳೇದ್, ಗಜೇಂದ್ರ, ಸಂತೋಷ್, ಸೂರ್ಯಪ್ರಗತಿ ಪತ್ರಿಕೆ ಸಂಪಾದಕ ಸಿ.ಹೆಚ್. ರವಿಕುಮಾರ್, ಗೂಳೂರು ಸುರೇಶ್, ಸಿದ್ದರಾಮು ಹೆಬ್ಬಾಕ, ಪರಮೇಶ್, ಹರೀಶ್, ಮಂಜುನಾಥ ತಾಳಮಕ್ಕಿ ಸೇರಿದಂತೆ ಪದಾಧಿಕಾರಿಗಳು ಹಾಗೂ ಸದಸ್ಯರು ಉಪಸ್ಥಿತರಿದ್ದರು.

ನ. 1ರ ಇಂಡಿಯಾ ಒಕ್ಕೂಟದ ಬೃಹತ್ ರ್‍ಯಾಲಿಗೆ ದೆಹಲಿ ಪೊಲೀಸರು ವಿಧಿಸಿದ ಷರತ್ತುಗಳು

ಎಸ್‌ಐಆರ್ ಪ್ರಕ್ರಿಯೆಯ ಅಕ್ರಮಗಳು ಹಾಗೂ ಚುನಾವಣಾ ಆಯೋಗದ ಕಾರ್ಯವೈಖರಿಯನ್ನು ವಿರೋಧಿಸಿ ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟವು ನವೆಂಬರ್ 1ರಂದು ದೆಹಲಿಯ ರಾಮಲೀಲಾ ಮೈದಾನದಲ್ಲಿ ಬೃಹತ್ ರ್‍ಯಾಲಿ ಹಮ್ಮಿಕೊಂಡಿದೆ. ಈ ‘ವೋಟ್ ಬಚಾವೋ, ದೇಶ್ ಬಚಾವೋ’ ರ್‍ಯಾಲಿಗೆ ದೆಹಲಿ ಪೊಲೀಸರು ಪ್ರಮುಖ ಷರತ್ತುಗಳೊಂದಿಗೆ ಅನುಮತಿ ನೀಡಿದ್ದಾರೆ. ಪ್ರಮುಖ ವಿರೋಧ ಪಕ್ಷಗಳ ಪ್ರಮುಖ ನಾಯಕರು, ಕಾರ್ಯಕರ್ತರು, ವಿದ್ಯಾರ್ಥಿ ಸಂಘಟನೆಗಳು ಹಾಗೂ ನಾಗರಿಕ ಸಮಾಜದ ಪ್ರತಿನಿಧಿಗಳು ಈ ಪ್ರತಿಭಟನಾ ಸಮಾವೇಶದಲ್ಲಿ ಭಾಗವಹಿಸಲಿದ್ದಾರೆ.

ಅಕ್ಟೋಬರ್ 27: ನವೆಂಬರ್ 1ರಂದು ನವದೆಹಲಿಯ ಐತಿಹಾಸಿಕ ರಾಮಲೀಲಾ ಮೈದಾನದಲ್ಲಿ ಬೃಹತ್ ‘ವೋಟ್ ಬಚಾವೋ, ದೇಶ್ ಬಚಾವೋ’ (ಮತ ಉಳಿಸಿ, ದೇಶ ಉಳಿಸಿ) ರ್‍ಯಾಲಿ ನಡೆಸಲು ಕಾಂಗ್ರೆಸ್ ನೇತೃತ್ವದ ಇಂಡಿಯಾ ಒಕ್ಕೂಟಕ್ಕೆ ದೆಹಲಿ ಪೊಲೀಸರು ಅನುಮತಿ ನೀಡಿದ್ದಾರೆ. ಆದರೆ, ಸಂಜೆ 5 ಗಂಟೆಯೊಳಗೆ ಕಾರ್ಯಕ್ರಮ ಮುಕ್ತಾಯಗೊಳಿಸುವುದು ಹಾಗೂ ಉದ್ರೇಕಕಾರಿ ಭಾಷಣಗಳ ಮೇಲಿನ ನಿಷೇಧ ಸೇರಿದಂತೆ ಹಲವು ಕಟ್ಟುನಿಟ್ಟಿನ ಷರತ್ತುಗಳನ್ನು ವಿಧಿಸಲಾಗಿದೆ. ರ್‍ಯಾಲಿಗೆ ಮುಂಚಿತವಾಗಿ ಅಥವಾ ನಂತರದಲ್ಲಿ ರಾಮಲೀಲಾ ಮೈದಾನದಲ್ಲಿ ರಾತ್ರಿ ತಂಗಲು ಯಾರಿಗೂ ಅವಕಾಶವಿಲ್ಲ. ಷರತ್ತುಗಳನ್ನು ಉಲ್ಲಂಘಿಸಿದರೆ ಅಥವಾ ಪೊಲೀಸ್ ನಿರ್ದೇಶನಗಳನ್ನು ಪಾಲಿಸದಿದ್ದರೆ ಆಯೋಜಕರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು ಹಾಗೂ ನೀಡಲಾದ ಅನುಮತಿಯನ್ನು ರದ್ದುಗೊಳಿಸಲಾಗುವುದು ಎಂದು ನೋಟಿಸ್‌ನಲ್ಲಿ ಎಚ್ಚರಿಸಲಾಗಿದೆ.

ಪ್ರಜಾಪ್ರಭುತ್ವ ಮತ್ತು ಸಂಸದೀಯ ವ್ಯವಸ್ಥೆಯ ಸದ್ಬಳಕೆಯಿಂದಷ್ಟೇ ಮಾದರಿ ಸಮಾಜ ನಿರ್ಮಾಣ ಸಾಧ್ಯ

ಸೂರ್ಯಪ್ರಗತಿನ್ಯೂಸ್.ಕಾಂ

ಭಾರತದ ಸಂವಿಧಾನ ನೀಡಿರುವ – ಪ್ರಜಾಪ್ರಭುತ್ವ ಆಡಳಿತ ಹಾಗೂ ಸಂಸದೀಯ ವ್ಯವಸ್ಥೆಗಳನ್ನ ಯುವಜನತೆ ಮತ್ತು ಪ್ರತಿಯೊಬ್ಬ ನಾಗರಿಕರು ಸೂಕ್ತವಾಗಿ, ಅರ್ಥಪೂರ್ಣವಾಗಿ ಬಳಸಿಕೊಂಡಾಗ ಮಾತ್ರ ಸರ್ವರಿಗೂ ಸಮಾನತೆ ಕಲ್ಪಿಸುವ ಹಾಗೂ ಸಶಕ್ತವಾದ ಉತ್ತಮ ಸಮಾಜವನ್ನ ಕಟ್ಟಲು ಸಾಧ್ಯ ಎಂದು ರಾಜ್ಯ ಜಲಸಂಪನ್ಮೂಲ ಸಚಿವರಾದ ಎನ್. ಚಲುವರಾಯಸ್ವಾಮಿ ಅವರು ಪ್ರತಿಪಾದಿಸಿದರು.

ನಗರದ ಮಂಡ್ಯ ಜಿಲ್ಲಾ ಪಂಚಾಯತ್ ಆವರಣದ ಕಾವೇರಿ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ಜಿಲ್ಲಾ ಮಟ್ಟದ "ಯುವ ಸಂಸತ್ತು" ಸ್ಪರ್ಧಾ ಕಾರ್ಯಕ್ರಮವನ್ನ ಉದ್ಘಾಟಿಸಿ ಅವರು ಸುದೀರ್ಘವಾಗಿ ಮಾತನಾಡಿದರು. ಪ್ರಜಾಪ್ರಭುತ್ವದ ಅಡಿಪಾಯ, ಸಂಸದೀಯ ನಿಯಮಗಳು, ಮತದಾನದ ಪಾವಿತ್ರ್ಯತೆ ಮತ್ತು ಇಂದಿನ ಯುವ ಪೀಳಿಗೆಯ ಸಾಮಾಜಿಕ ಜವಾಬ್ದಾರಿಗಳ ಕುರಿತು ಸಚಿವರು ಸಭಿಕರಲ್ಲಿ ಗಂಭೀರ ಚಿಂತನೆ ಮೂಡಿಸಿದರು.

ಪ್ರಜಾಪ್ರಭುತ್ವದಲ್ಲಿ ಮಾತು ಅರ್ಥಗರ್ಭಿತವಾಗಿರಲಿ; ಕೇವಲ ನಿಂದನೆಯಾಗದಿರಲಿ ತಮ್ಮ ರಾಜಕೀಯ ಹಾಗೂ ಸಾರ್ವಜನಿಕ ಜೀವನದ ನೈಜ ಘಟನೆಯೊಂದನ್ನ ನೆನಪಿಸಿಕೊಂಡ ಸಚಿವರು, "ಒಮ್ಮೆ ನಾನೂ ಹಾಗೂ ಶ್ರೀರಂಗಪಟ್ಟಣದ ಶಾಸಕರು ರೈತರು ನಡೆಸುತ್ತಿದ್ದ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿದ್ದೆವು. ಸಂಕಷ್ಟದಲ್ಲಿದ್ದ ರೈತರು ಆಕ್ರೋಶದಿಂದ ದೇಶದ ಪ್ರಧಾನಮಂತ್ರಿಗಳನ್ನ, ರಾಜ್ಯದ ಮುಖ್ಯಮಂತ್ರಿಗಳನ್ನ ತೀವ್ರ ಶಬ್ದಗಳಿಂದ ನಿಂದಿಸುತ್ತಿದ್ದರು.



ಅವರ ಸಂಕಷ್ಟ ನಮಗೆ ಅರ್ಥವಾಗುತ್ತದೆ, ಆದರೆ ನಾವು ಪ್ರಜಾಪ್ರಭುತ್ವದ ಆಳವನ್ನ ಅರಿಯಬೇಕಿದೆ. ಈ ವ್ಯವಸ್ಥೆಯನ್ನ ಆಯ್ಕೆ ಮಾಡಿರುವವರು ಯಾರು..? ಆ ಉನ್ನತ ಸ್ಥಾನದಲ್ಲಿ ಕುಳಿತವರನ್ನ ಅಲ್ಲಿಗೆ ಕಳುಹಿಸಿದವರು ಯಾರು? ನಾವೇ ತಾನೇ? ನಮ್ಮದೇ ಮತಗಳಿಂದ ಆಯ್ಕೆಯಾದವರ ಮೇಲೆ ಕೇವಲ ವೈಯಕ್ತಿಕ ನಿಂದನೆ ಮಾಡುವುದರಿಂದ ಸಮಸ್ಯೆ ಬಗೆಹರಿಯುವುದಿಲ್ಲ" ಎಂದರು.

ಮುಂದುವರಿದು ಮಾತನಾಡಿದ ಅವರು, "ಪ್ರಜಾಪ್ರಭುತ್ವದಲ್ಲಿ ನಾವು ಮಾತನಾಡುವ ಮಾತು, ಎತ್ತುವ ಧ್ವನಿ ಸದಾ ಅರ್ಥಗರ್ಭಿತವಾಗಿರಬೇಕು. ನಾವು ಮಂಡಿಸುವ ವಿಷಯ, ಸಮಸ್ಯೆ ಮತ್ತು ಪ್ರಶ್ನೆಗಳು ಎಷ್ಟರಮಟ್ಟಿಗೆ ತೂಕದ್ದಾಗಿರಬೇಕೆಂದರೆ, ಉನ್ನತ ಆಡಳಿತ ಚುಕ್ಕಾಣಿ ಹಿಡಿದಿರುವ ನಾಯಕರು ಮತ್ತು ಅಧಿಕಾರಿಗಳು ಅದಕ್ಕೆ ಜವಾಬ್ದಾರಿಯುತವಾಗಿ ಉತ್ತರ ಕೊಡಲೇಬೇಕಾದ ಪರಿಸ್ಥಿತಿ ನಿರ್ಮಾಣವಾಗಬೇಕು. ಅಂತಹ ಗುಣಾತ್ಮಕ ಸಂವಾದ ಹಾಗೂ ಚರ್ಚೆಗಳು ನಮ್ಮ ಸಮಾಜದಲ್ಲಿ ಬೆಳೆಯಬೇಕು" ಎಂದು ಅಭಿಪ್ರಾಯಪಟ್ಟರು.

ಒಂದು ಮತ ಕೇವಲ ಗುರುತಲ್ಲ, ವ್ಯವಸ್ಥೆಯನ್ನೇ ಬದಲಿಸುವ ಮಹಾನ್ ಅಸ್ತ್ರ ಮತದಾನದ ಮಹತ್ವವನ್ನು ಯುವಜನತೆಗೆ ಮನದಟ್ಟು ಮಾಡಿದ ಸಚಿವರು, "ಚುನಾವಣೆ ಬಂದಾಗ ಮತ ಚಲಾಯಿಸುವುದನ್ನು ಅನೇಕರು ಕೇವಲ ಒಂದು ಔಪಚಾರಿಕ ಕ್ರಿಯೆ ಅಥವಾ ರಜಾದಿನವೆಂದು ಭಾವಿಸುತ್ತಾರೆ. ಆದರೆ ಒಂದು ಮತ ಎಂಬುದು ಕೇವಲ ಮತವಲ್ಲ; ಅದು ಇಡೀ ಆಡಳಿತ ವ್ಯವಸ್ಥೆಯನ್ನೇ ಬುಡಮೇಲು ಮಾಡುವ, ಸರಿಪಡಿಸುವ ಹಾಗೂ ಬದಲಿಸುವ ಅಗಾಧ ಶಕ್ತಿ. ನಿಮ್ಮ ಒಂದು ಮತ ದೇಶದ ಭವಿಷ್ಯವನ್ನೇ ನಿರ್ಧರಿಸುತ್ತದೆ. ಆದ್ದರಿಂದ ಜಾತಿ, ಹಣ ಅಥವಾ ಯಾವುದೇ ಆಮಿಷಗಳಿಗೆ ಒಳಗಾಗದೆ, ನಾಡಿನ ಅಭಿವೃದ್ಧಿಗೆ ಕಟಿಬದ್ಧವಾಗಿ ಶ್ರಮಿಸುವ ಸೂಕ್ತ ಮತ್ತು ಯೋಗ್ಯ ವ್ಯಕ್ತಿಯನ್ನು ಆಯ್ಕೆ ಮಾಡುವುದು ಪ್ರತಿಯೊಬ್ಬ ಪ್ರಜೆಯ ಆದ್ಯ ಕರ್ತವ್ಯ ಹಾಗೂ ಜವಾಬ್ದಾರಿಯಾಗಿದೆ" ಎಂದು ಕರೆ ನೀಡಿದರು.

ಸಂಸದೀಯ ಮೌಲ್ಯಗಳನ್ನು ಮೈಗೂಡಿಸಿಕೊಳ್ಳಿ

ಇಂದಿನ ಯುವ ಸಂಸತ್ತು ಕಾರ್ಯಕ್ರಮದ ಪ್ರಸ್ತುತತೆಯನ್ನು ವಿವರಿಸಿದ ಅವರು, "ಇಂತಹ ವೇದಿಕೆಗಳು ಕೇವಲ ಭಾಷಣ ಮಾಡುವ ಸ್ಥಳಗಳಲ್ಲ. ದೇಶದ ಶಾಸಕಾಂಗ ಹೇಗೆ



ಕಾರ್ಯನಿರ್ವಹಿಸುತ್ತದೆ, ಒಂದು ಮಸೂದೆ ಕಾಯ್ದೆಯಾಗುವುದು ಹೇಗೆ, ಸಾರ್ವಜನಿಕ ಸಮಸ್ಯೆಗಳನ್ನು ಸಭೆಯಲ್ಲಿ ಮಂಡಿಸುವ ಶಿಷ್ಟಾಚಾರವೇನು ಎಂಬುದನ್ನು ಕಲಿಯುವ ಪಾಠಶಾಲೆಗಳಿವು. ಇಂದಿನ ವಿದ್ಯಾರ್ಥಿಗಳೇ ನಾಳಿನ ಶಾಸಕರು, ಸಂಸದರು ಮತ್ತು ಆಡಳಿತಗಾರರು. ಸಂವಿಧಾನ ನಮಗೆ ನೀಡಿರುವ ಹಕ್ಕುಗಳ ಜೊತೆಗೆ ಕರ್ತವ್ಯಗಳನ್ನೂ ಅರಿತುಕೊಂಡು, ಸಂಸದೀಯ ನಿಯಮಗಳನ್ನು ಗೌರವಿಸುವ ಪ್ರಜ್ಞಾವಂತ ನಾಯಕರಾಗಿ ಯುವಜನತೆ ಹೊರಹೊಮ್ಮಬೇಕು" ಎಂದು ಆಶಿಸಿದರು.

ರಾಜ್ಯ ಮಟ್ಟಕ್ಕೆ ಆಯ್ಕೆಯಾಗಲಿರುವ ವಿದ್ಯಾರ್ಥಿಗಳಿಗೆ ವಿಶೇಷ ಅಭಿನಂದನೆ ತಿಳಿಸಿದ ಸಚಿವರು

ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಅತ್ಯುತ್ತಮ ವಾಗ್ಮಿಗಳಾಗಿ ಮತ್ತು ಸಂಸದೀಯ ಚರ್ಚೆಗಳಲ್ಲಿ ಮುಂಚೂಣಿ ಸಾಧನೆ ಮಾಡಿ, ಮುಂಬರುವ ರಾಜ್ಯ ಮಟ್ಟದ "ಯುವ ಸಂಸತ್"ಗೆ ಆಯ್ಕೆಯಾಗಲಿರುವ ಮಂಡ್ಯ ಜಿಲ್ಲೆಯ 7 ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಸಚಿವರು ವಿಶೇಷ ಅಭಿನಂದನೆ ತಿಳಿಸಿದರು.

"ಮಂಡ್ಯ ಜಿಲ್ಲೆಯು ರಾಜಕೀಯ ಪ್ರಜ್ಞೆ, ಹೋರಾಟದ ಕಿಚ್ಚು ಮತ್ತು ವೈಚಾರಿಕತೆಗೆ ಹೆಸರುವಾಸಿಯಾದ ನೆಲ. ಇಲ್ಲಿನ ಯುವ ಪ್ರತಿಭೆಗಳು ರಾಜ್ಯ ಮಟ್ಟದಲ್ಲೂ ತಮ್ಮ ಅದ್ಭುತವಾದ ಮಂಡನೆ, ವಿಷಯ ಜ್ಞಾನ ಮತ್ತು ಸಂಸದೀಯ ಶಿಸ್ತನ್ನು ಪ್ರದರ್ಶಿಸಬೇಕು. ಕೇವಲ ಭಾಗವಹಿಸುವುದಷ್ಟೇ ಅಲ್ಲದೆ, ರಾಜ್ಯ ಮಟ್ಟದಲ್ಲೂ ಗೆಲುವು ಸಾಧಿಸಿ ಮಂಡ್ಯ ಜಿಲ್ಲೆಯ ಹೆಸರನ್ನ ರಾಜ್ಯಮಟ್ಟದಲ್ಲಿ ರಾರಾಜಿಸುವಂತೆ ಮಾಡಬೇಕು" ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಮಂಡ್ಯ ಕ್ಷೇತ್ರದ ಶಾಸಕರಾದ ರವಿಕುಮಾರ್ ಗಣಿಗ, ಜಿಲ್ಲೆಯ ಪ್ರಮುಖ ಜನಪ್ರತಿನಿಧಿಗಳು, ಜಿಲ್ಲಾಧಿಕಾರಿಗಳಾದ ಡಾ.ಕುಮಾರ್, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ ಆರ್ ನಂದಿನಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ.ಶೋಭರಾಣಿ, ಜಿಲ್ಲಾ ಶಿಕ್ಷಣಾಧಿಕಾರಿಗಳು , ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಅಧಿಕಾರಿಗಳು, ವಿವಿಧ ಕಾಲೇಜುಗಳ ಪ್ರಾಂಶುಪಾಲರು, ಉಪನ್ಯಾಸಕರು ಹಾಗೂ ನೂರಾರು ವಿದ್ಯಾರ್ಥಿ–ಯುವಜನರು ಉಪಸ್ಥಿತರಿದ್ದರು.

ಇಂದು ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನಲ್ಲಿ 'ಇನೋವೇಷನ್ ಇಗ್ನೈಟ್ ಸಿಂಪೋಸಿಯಂ' 2.0 ವಿಷಯ ಕುರಿತು ರಾಷ್ಟ್ರೀಯ ಮಟ್ಟದ ಕಾರ್ಯಕ್ರಮ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಗರದ ಶಿರಾ ರಸ್ತೆಯಲ್ಲಿರುವ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ವತಿಯಿಂದ ಕ್ರಿಯೇಟಿವ್ ಕೋಡೆಕ್ಸ್ ಸಂಸ್ಥೆಯ ಸಹಯೋಗದಲ್ಲಿ ಅ.28 ರಂದು (ಇಂದು) ಬುಧವಾರ ಮಧ್ಯಾಹ್ನ 3 ಗಂಟೆಗೆ 'ಇನೋವೇಶನ್ ಇಗ್ನೈಟ್ ಸಿಂಪೋಸಿಯಂ 2.0' ಎಂಬ ವಿಷಯದ ಬಗ್ಗೆ ರಾಷ್ಟ್ರೀಯ ಮಟ್ಟದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.

ಕಾರ್ಯಕ್ರಮದಲ್ಲಿ ಅಧ್ಯಕ್ಷತೆಯನ್ನು ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ಅಧ್ಯಕ್ಷ ಡಾ.ಎಂ.ಆರ್. ಹುಲಿನಾಯ್ಕರ್‌ರವರು ವಹಿಸಲಿದ್ದಾರೆ. ಕಾರ್ಯಕ್ರಮದ ಮುಖ್ಯಅತಿಥಿಗಳಾಗಿ ಎಕ್ಸೋಸ್ಟಾರ್ ಇಂಡಿಯಾ ಪ್ರೈವೇಟ್ ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥೆ ದೀಪಾ ಪ್ರಸಾದ್ ಎಂ. ಎನ್. ರವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಮುಖ್ಯ ಪೋಷಕರಾಗಿ ಶ್ರೀದೇವಿ ಚಾರಿಟಬಲ್ ಟ್ರಸ್ಟ್‌ನ ನಿರ್ದೇಶಕರು ಹಾಗೂ ಟ್ರಸ್ಟಿಗಳಾದ ಡಾ. ರಮಣ್ ಎಂ. ಹುಲಿನಾಯ್ಕರ್, ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಾದ ಎಂ.ಎಸ್.ಪಾಟೀಲ್, ಶ್ರೀದೇವಿ ಚಾರಿಟಬಲ್‌ನ ಟ್ರಸ್ಟಿಗಳಾದ ಡಾ.ಲಾವಣ್ಯ ರಮಣ್ ಮತ್ತು ಶ್ರೀದೇವಿ ಚಾರಿಟಬಲ್ ಟ್ರಸ್ಟಿ ಶ್ರೀಮತಿ ಅಂಬಿಕಾ ಎಂ. ಹುಲಿನಾಯ್ಕರ್ ಅವರು ಭಾಗವಹಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀದೇವಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಂಶುಪಾಲರಾದ ಡಾ. ನರೇಂದ್ರ ವಿಶ್ವನಾಥ್, ಸಂಯೋಜಕರಾಗಿ ಕಂಪ್ಯೂಟರ್ ಸೈನ್ಸ್ ಮತ್ತು ಇಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ಬಸವೇಶ ಡಿ., ಉಪಪ್ರಾಂಶುಪಾಲರು ಹಾಗೂ ಶೈಕ್ಷಣಿಕ ವಿಭಾಗದ ಡೀನ್ ಡಾ. ಚಂದ್ರಶೇಖರ್ ಎನ್, ಸಹಸಂಯೋಜಕರಾಗಿ ಡಾ.ಮಂಜುಳಾ.ಹೆಚ್. ನೆಬಾಗಿರಿ ಕಾರ್ಯನಿರ್ವಹಿಸಲಿದ್ದಾರೆ. ಮಮತಾ ಎಲ್. ಮತ್ತು ಸ್ನೇಹಾ ಎಸ್. ಆರ್. ಹಾಗೂ ವಿದ್ಯಾರ್ಥಿ–ವಿದ್ಯಾರ್ಥಿನಿಯರು, ಬೋಧಕ–ಬೋಧಕೇತರರು ಸಿಬ್ಬಂದಿ ವರ್ಗದವರು ಭಾಗವಹಿಸಲಿದ್ದಾರೆ.

ಅಕ್ಟೋಬರ್ 27 ಮತ್ತು 28ರಂದು ಹಲವು ರೈಲುಗಳ ಸಂಚಾರದಲ್ಲಿ ವ್ಯತ್ಯಯ

ತುಮಕೂರು ಜಿಲ್ಲೆಯ ತಿಪಟೂರು ಮತ್ತು ಹೊನ್ನವಳ್ಳಿ ರಸ್ತೆ ರೈಲು ನಿಲ್ದಾಣಗಳ ನಡುವಿನ ಲೆವೆಲ್ ಕ್ರಾಸಿಂಗ್ ಸಂಖ್ಯೆ 88ರಲ್ಲಿ ಕಾಂಪೋಸಿಟ್ ಗರ್ಡರ್ ಅಳವಡಿಕೆ ಕಾಮಗಾರಿ ನಡೆಯಲಿದೆ. ಈ ಹಿನ್ನೆಲೆಯಲ್ಲಿ ರೈಲು ಮಾರ್ಗ ಮತ್ತು ವಿದ್ಯುತ್ ಪೂರೈಕೆಯನ್ನು ಸ್ಥಗಿತಗೊಳಿಸಿ ಕಾಮಗಾರಿ ಕೈಗೊಳ್ಳಲಾಗುತ್ತಿದ್ದು, ಅಕ್ಟೋಬರ್ 27 ಮತ್ತು 28ರಂದು ಹಲವು ರೈಲುಗಳ ಸಂಚಾರದಲ್ಲಿ ವ್ಯತ್ಯಯ ಉಂಟಾಗಲಿದೆ. ಕೆಲವು ರೈಲುಗಳನ್ನು ರದ್ದುಪಡಿಸಲಾಗಿದ್ದು, ಇನ್ನು ಕೆಲವು ರೈಲುಗಳ ಮಾರ್ಗ ಬದಲಾವಣೆ ಹಾಗೂ ಪ್ರಯಾಣ ಆರಂಭದ ಸಮಯದಲ್ಲಿ ಮರುನಿಗದಿಯಾಗಿದೆ.

ಅಕ್ಟೋಬರ್ 27ರಂದು ಮಾರ್ಗ ಬದಲಾವಣೆಯಾಗುವ ರೈಲುಗಳು 12090 ಶಿವಮೊಗ್ಗ ಟೌನ್–ಕೆಎಸ್‌ಆರ್ ಬೆಂಗಳೂರು ಜನಶತಾಬ್ದಿ ಎಕ್ಸ್‌ಪ್ರೆಸ್: ಅರಸೀಕೆರೆ, ಹಾಸನ, ನೆಲಮಂಗಲ ಮತ್ತು ಯಶವಂತಪುರ ಮಾರ್ಗವಾಗಿ ಸಂಚರಿಸಲಿದೆ. ತಿಪಟೂರು ಮತ್ತು ತುಮಕೂರು ನಿಲ್ದಾಣಗಳಲ್ಲಿ ನಿಲುಗಡೆ ಇರುವುದಿಲ್ಲ. 56519 ಕೆಎಸ್‌ಆರ್ ಬೆಂಗಳೂರು–ಹೊಸಪೇಟೆ ಪ್ಯಾಸೆಂಜರ್: ಅಕ್ಟೋಬರ್ 27 ಮತ್ತು 28ರಂದು ಚಿಕ್ಕಬಾಣಾವರ, ನೆಲಮಂಗಲ, ಹಾಸನ ಮತ್ತು ಅರಸೀಕೆರೆ ಮಾರ್ಗವಾಗಿ ಸಂಚರಿಸಲಿದೆ. ದೊಡ್ಡಬೆಲೆ, ಕ್ಯಾತ್ಸಂದ್ರ, ತುಮಕೂರು, ಗುಬ್ಬಿ, ಅಮಸಂದ್ರ ಮತ್ತು ತಿಪಟೂರು ನಿಲ್ದಾಣಗಳಲ್ಲಿ ನಿಲುಗಡೆ ಇರುವುದಿಲ್ಲ.

11006 ಪುದುಚೇರಿ–ದಾದರ್ ಎಕ್ಸ್‌ಪ್ರೆಸ್: ಚಿಕ್ಕಬಾಣಾವರ, ನೆಲಮಂಗಲ, ಹಾಸನ ಮತ್ತು ಅರಸೀಕೆರೆ ಮಾರ್ಗವಾಗಿ ಸಂಚರಿಸಲಿದೆ. ತುಮಕೂರು ಮತ್ತು ತಿಪಟೂರು ನಿಲ್ದಾಣಗಳಲ್ಲಿ ನಿಲುಗಡೆ ಇರುವುದಿಲ್ಲ. ಅಕ್ಟೋಬರ್ 28ರಂದು ಮಾರ್ಗ ಬದಲಾವಣೆಯಾಗುವ ರೈಲುಗಳು 12079 ಕೆಎಸ್‌ಆರ್ ಬೆಂಗಳೂರು–ಹುಬ್ಬಳ್ಳಿ ಜನಶತಾಬ್ದಿ ಎಕ್ಸ್‌ಪ್ರೆಸ್: ನೆಲಮಂಗಲ, ಹಾಸನ ಮತ್ತು ಅರಸೀಕೆರೆ ಮಾರ್ಗವಾಗಿ ಸಂಚರಿಸಲಿದೆ. ತುಮಕೂರು ಮತ್ತು ತಿಪಟೂರು ನಿಲ್ದಾಣಗಳಲ್ಲಿ ನಿಲುಗಡೆ ಇರುವುದಿಲ್ಲ.

ಮೂರು ರೈಲುಗಳ ಪ್ರಯಾಣ ಆರಂಭದ ಸಮಯ ಬದಲಾವಣೆ 17310 ವಾಸ್ಕೋ ಡ ಗಾಮಾ–ಯಶವಂತಪುರ ಎಕ್ಸ್‌ಪ್ರೆಸ್: ಅಕ್ಟೋಬರ್ 27ರಂದು ವಾಸ್ಕೋ ಡ ಗಾಮಾದಿಂದ ಹೊರಡುವ ಸಮಯವನ್ನು 120 ನಿಮಿಷ ಮುಂದೂಡಲಾಗಿದೆ. 20652 ತಾಳಗುಪ್ಪ–ಕೆಎಸ್‌ಆರ್ ಬೆಂಗಳೂರು ಎಕ್ಸ್‌ಪ್ರೆಸ್: ಅಕ್ಟೋಬರ್ 28ರಂದು ತಾಳಗುಪ್ಪದಿಂದ ಹೊರಡುವ ಸಮಯವನ್ನು 140 ನಿಮಿಷ ಮುಂದೂಡಲಾಗಿದೆ.

16239 ಚಿಕ್ಕಮಗಳೂರು–ಯಶವಂತಪುರ ಎಕ್ಸ್‌ಪ್ರೆಸ್: ಅಕ್ಟೋಬರ್ 28ರಂದು ಚಿಕ್ಕಮಗಳೂರಿನಿಂದ ಹೊರಡುವ ಸಮಯವನ್ನು 60 ನಿಮಿಷ ಮುಂದೂಡಲಾಗಿದೆ.

ರೈಲು ಸಂಚಾರದಲ್ಲಿ ಬದಲಾವಣೆ ಇರುವುದರಿಂದ ಪ್ರಯಾಣಿಕರು ರೈಲಿನ ಸಂಖ್ಯೆ, ಸಂಚಾರದ ದಿನಾಂಕ, ಮಾರ್ಗ ಮತ್ತು ನಿಲುಗಡೆಗಳ ವಿವರಗಳನ್ನು ಪರಿಶೀಲಿಸಿಕೊಂಡು ಪ್ರಯಾಣ ಯೋಜನೆ ರೂಪಿಸಿಕೊಳ್ಳಬೇಕೆಂದು ರೈಲ್ವೆ ಇಲಾಖೆ ವಿನಂತಿ ಮಾಡಿದೆ.

ವಿದ್ಯಾರ್ಥಿಗಳು ಆಸಕ್ತಿ, ಸಾಮರ್ಥ್ಯಕ್ಕೆ ತಕ್ಕಂತೆ ವೃತ್ತಿ ಆಯ್ಕೆ ಮಾಡಿಕೊಳ್ಳಿ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ವಿದ್ಯಾರ್ಥಿಗಳಿಗೆ ವೃತ್ತಿ ಆಯ್ಕೆ, ಉದ್ಯೋಗಾವಕಾಶಗಳು ಹಾಗೂ ಮೊಬೈಲ್ ಬಳಕೆಯ ಕುರಿತು ಉಪಯುಕ್ತ ಮಾಹಿತಿಯನ್ನು ತುಮಕೂರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ವೃತ್ತಿ ಮಾರ್ಗದರ್ಶಕ ಶಶಿಧರ್‌ರವರು ತಿಳಿಸಿದರು.

ನಗರದ ಮೇಳೆಕೋಟೆ ಮುಖ್ಯ ರಸ್ತೆಯಲ್ಲಿರುವ ಕೇಂಬ್ರಿಡ್ಜ್ ಕಾಲೇಜಿನಲ್ಲಿ ವತಿಯಿಂದ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಸಂಯುಕ್ತಾಶ್ರಯದಲ್ಲಿ ಅ.27ರಂದು ಮಂಗಳವಾರ ವಿದ್ಯಾರ್ಥಿಗಳಿಗೆ ವೃತ್ತಿ ಮಾರ್ಗದರ್ಶನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮದಲ್ಲಿ ಉದ್ಘಾಟಿಸಿದ್ದ ವೃತ್ತಿ ಮಾರ್ಗದರ್ಶಕರಾದ ಶಶಿಧರ್ ಅವರು ಮಾತನಾಡಿ, ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಬಗ್ಗೆ ಈಗಿನಿಂದಲೇ ಯೋಚಿಸಬೇಕು. ತಮ್ಮ ಆಸಕ್ತಿ, ಸಾಮರ್ಥ್ಯ ಮತ್ತು ಗುರಿಗೆ ತಕ್ಕಂತೆ ವೃತ್ತಿಯನ್ನು ಆಯ್ಕೆ ಮಾಡಿಕೊಳ್ಳಬೇಕು. ಇತರರನ್ನು ನೋಡಿ ವೃತ್ತಿ ಆಯ್ಕೆ ಮಾಡಿಕೊಳ್ಳುವ ಬದಲು, ತಮಗೆ ಯಾವ ಕ್ಷೇತ್ರದಲ್ಲಿ ಆಸಕ್ತಿ ಇದೆ ಎಂಬುದನ್ನು ತಿಳಿದುಕೊಂಡು ನಿರ್ಧಾರ ತೆಗೆದುಕೊಳ್ಳಬೇಕು ಎಂದು ತಿಳಿಸಿದರು.

ಇಂದಿನ ದಿನಗಳಲ್ಲಿ ಸರ್ಕಾರಿ ಮತ್ತು ಖಾಸಗಿ ಕ್ಷೇತ್ರಗಳಲ್ಲಿ ಅನೇಕ ಉದ್ಯೋಗಾವಕಾಶಗಳಿವೆ. ಸ್ಪರ್ಧಾತ್ಮಕ ಪರೀಕ್ಷೆಗಳ ಮೂಲಕವೂ ವಿವಿಧ ಉದ್ಯೋಗಗಳನ್ನು ಪಡೆಯಬಹುದು. ಉದ್ಯೋಗ ಪಡೆಯಲು ಪದವಿ ಶಿಕ್ಷಣದ ಜೊತೆಗೆ ಕಂಪ್ಯೂಟರ್ ಜ್ಞಾನ, ಸಂವಹನ ಕೌಶಲ, ಸಾಮಾನ್ಯ ಜ್ಞಾನ ಹಾಗೂ ಸಮಸ್ಯೆಗಳನ್ನು ಪರಿಹರಿಸುವ ಸಾಮರ್ಥ್ಯ ಬೆಳೆಸಿಕೊಳ್ಳುವುದು ಮುಖ್ಯ. ವಿದ್ಯಾರ್ಥಿಗಳು ಪ್ರತಿದಿನ ಹೊಸ ವಿಷಯಗಳನ್ನು ಕಲಿಯಬೇಕು. ಸೋಲು ಎದುರಾದಾಗ ನಿರಾಶರಾಗದೆ, ಅದರಿಂದ ಪಾಠ ಕಲಿತು ಮತ್ತೆ ಪ್ರಯತ್ನಿಸಬೇಕು. ಸ್ಪಷ್ಟವಾದ ಗುರಿ, ಪರಿಶ್ರಮ ಮತ್ತು ಆತ್ಮವಿಶ್ವಾಸದಿಂದ ಜೀವನದಲ್ಲಿ ಸಾಧನೆ ಮಾಡಲು ಸಾಧ್ಯ ಎಂದರು. ಮೊಬೈಲ್ ಬಳಕೆಯ ಕುರಿತು ಮಾತನಾಡಿದ ಅವರು, ಮೊಬೈಲ್ ಇಂದಿನ ಜೀವನದಲ್ಲಿ ಅಗತ್ಯವಾದ ಸಾಧನವಾಗಿದೆ. ಅದನ್ನು ಶಿಕ್ಷಣ, ಮಾಹಿತಿ ಸಂಗ್ರಹ, ಹೊಸ ಕೌಶಲಗಳ ಕಲಿಕೆ ಮತ್ತು ಉದ್ಯೋಗಾವಕಾಶಗಳ ಹುಡುಕಾಟಕ್ಕೆ ಬಳಸಿಕೊಳ್ಳಬೇಕು. ಆದರೆ ಮೊಬೈಲ್ ಅನ್ನು ಅತಿಯಾಗಿ ಬಳಸುವುದರಿಂದ ವಿದ್ಯಾರ್ಥಿಗಳ ಓದಿಗೆ ತೊಂದರೆಯಾಗಬಹುದು. ಸಾಮಾಜಿಕ ಜಾಲತಾಣಗಳು, ಆಟಗಳು ಮತ್ತು ಅನಗತ್ಯ ವಿಡಿಯೊಗಳನ್ನು ದೀರ್ಘಕಾಲ ವೀಕ್ಷಿಸುವುದರಿಂದ ಸಮಯ ವ್ಯರ್ಥವಾಗುವುದರ ಜೊತೆಗೆ, ಏಕಾಗ್ರತೆ ಕಡಿಮೆಯಾಗಬಹುದು ಮತ್ತು ನಿದ್ರೆಯ ಮೇಲೂ ಪರಿಣಾಮ ಬೀರಬಹುದು. ವಿದ್ಯಾರ್ಥಿಗಳು ಮೊಬೈಲ್ ಬಳಕೆಗೆ ಸಮಯದ ಮಿತಿಯನ್ನು ನಿಗದಿಪಡಿಸಿಕೊಳ್ಳಬೇಕು. ಓದುವ ಸಮಯದಲ್ಲಿ ಮೊಬೈಲ್ ಅನ್ನು ದೂರವಿಡಬೇಕು. ಇತರರ ಜೀವನವನ್ನು ಸಾಮಾಜಿಕ ಜಾಲತಾಣಗಳಲ್ಲಿ ನೋಡಿ ತಮ್ಮನ್ನು ಹೋಲಿಸಿಕೊಳ್ಳದೆ, ತಮ್ಮ ಗುರಿಯ ಕಡೆಗೆ ಗಮನ ಹರಿಸಬೇಕು. ಮೊಬೈಲ್ ನಮ್ಮ ಜ್ಞಾನವನ್ನು ಹೆಚ್ಚಿಸುವ ಸಾಧನವಾಗಬೇಕೇ ಹೊರತು ನಮ್ಮ ಅಮೂಲ್ಯ ಸಮಯವನ್ನು ಕಳೆಯುವ ಸಾಧನವಾಗಬಾರದು. ತಂತ್ರಜ್ಞಾನವನ್ನು ಸರಿಯಾದ ರೀತಿಯಲ್ಲಿ ಬಳಸಿಕೊಂಡರೆ ಅದು ನಮ್ಮ ಭವಿಷ್ಯದ ಬೆಳವಣಿಗೆಗೆ ಸಹಕಾರಿಯಾಗುತ್ತದೆ ಎಂದು ಸಲಹೆ ನೀಡಿದರು.

ಕಾರ್ಯಕ್ರಮದಲ್ಲಿ ಕೇಂಬ್ರಿಡ್ಜ್ ಪದವಿ ಪೂರ್ವ ಕಾಲೇಜಿನ ಪ್ರಾಂಶುಪಾಲ ಕೆ.ಪೃಥ್ವಿರಾಜ್ ಚೌಹಾಣ್ ಅವರು ಮಾತನಾಡಿ, ವಿದ್ಯಾರ್ಥಿ ಜೀವನವು ಭವಿಷ್ಯವನ್ನು ರೂಪಿಸಿಕೊಳ್ಳುವ ಪ್ರಮುಖ ಹಂತವಾಗಿದೆ. ಈ ಸಮಯದಲ್ಲಿ ಓದಿನ ಕಡೆಗೆ ಗಮನ ಹರಿಸುವುದರ ಜೊತೆಗೆ, ಮುಂದಿನ ಶಿಕ್ಷಣ ಮತ್ತು ಉದ್ಯೋಗದ ಬಗ್ಗೆ ಸರಿಯಾದ ನಿರ್ಧಾರ ತೆಗೆದುಕೊಳ್ಳಬೇಕು. ಶಿಕ್ಷಕರು ಮತ್ತು ಪೋಷಕರ ಮಾರ್ಗದರ್ಶನ ಪಡೆದು ತಮ್ಮ ಗುರಿಯನ್ನು ಸಾಧಿಸಲು ಪ್ರಯತ್ನಿಸಬೇಕು ಎಂದರು. ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಒಂದಲ್ಲ ಒಂದು ಪ್ರತಿಭೆ ಇರುತ್ತದೆ. ಅದನ್ನು ಗುರುತಿಸಿಕೊಂಡು ಬೆಳೆಸಿಕೊಳ್ಳುವುದು ಮುಖ್ಯ. ವಿದ್ಯಾರ್ಥಿಗಳು ಪಠ್ಯಜ್ಞಾನದ ಜೊತೆಗೆ ಸಾಮಾನ್ಯ ಜ್ಞಾನ, ಉತ್ತಮ ಸಂವಹನ ಮತ್ತು ನಾಯಕತ್ವದ ಗುಣಗಳನ್ನು ಬೆಳೆಸಿಕೊಳ್ಳಬೇಕು. ಸಮಯದ ಮಹತ್ವವನ್ನು ಅರಿತು, ಅನಗತ್ಯ ಚಟುವಟಿಕೆಗಳಿಂದ ದೂರವಿದ್ದು, ಓದು ಮತ್ತು ಕೌಶಲಾಭಿವೃದ್ಧಿಗೆ ಹೆಚ್ಚಿನ ಆದ್ಯತೆ ನೀಡಬೇಕು. ತಮ್ಮ ಸಾಮರ್ಥ್ಯದ ಮೇಲೆ ನಂಬಿಕೆ ಇಟ್ಟುಕೊಂಡು ನಿರಂತರವಾಗಿ ಪ್ರಯತ್ನಿಸಿದರೆ ಉತ್ತಮ ಭವಿಷ್ಯ ರೂಪಿಸಿಕೊಳ್ಳಬಹುದು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಆಡಳಿತಾಧಿಕಾರಿ ಪ್ರಿಯಾ.ಎಂ, ಕೇಂಬ್ರಿಡ್ಜ್ ಇನ್ಸ್ಟಿಟ್ಯೂಟ್ ಆಫ್ ಪ್ರೊಫೆಷನಲ್ ಸ್ಟಡೀಸ್‌ನ ಉಪ ಪ್ರಾಂಶುಪಾಲ ಜಯರಾಮು ಎಂ, ಕೇಂಬ್ರಿಡ್ಜ್ ಪದವಿ ಪೂರ್ವ ಕಾಲೇಜಿನ ಉಪ ಪ್ರಾಂಶುಪಾಲ ಪುನೀತ್ ಕುಮಾರ್, ಮಹೇಶ್, ನೂರ್ ಕುಬ್ರಾ, ಪ್ರಸನ್ನ ಕುಮಾರ್ ಹಾಗೂ ಕಾಲೇಜಿನ ಸಿಬ್ಬಂದಿ ಉಪಸ್ಥಿತರಿದ್ದರು.

ಲವ–ಕುಶ ಬಯಲಾಟ ಗೆಜ್ಜೆ ಪೂಜೆ



ಸೂರ್ಯಪ್ರಗತಿನ್ಯೂಸ್.ಕಾಂ

ವಾಲ್ಮೀಕಿ ಮಹರ್ಷಿ ಬೇಡನಾಗಿದ್ದವರು ಅಕ್ಷರ ಶಕ್ತಿಯಿಂದ ಇಡೀ ಜಗತ್ತು ಅವರನ್ನು ಪೂಜನೀಯರನ್ನಾಗಿಸುವ ಹಾಗೆ ಬೆಳೆದು ನಿಲ್ಲುತ್ತಾರೆ. ಅಕ್ಷರಕ್ಕಿಂತ ದೊಡ್ಡ ಶಕ್ತಿ ಮತ್ತೊಂದಿಲ್ಲ ಎನ್ನುವುದನ್ನು ಅವರ 'ರಾಮಾಯಣ' ಕಾವ್ಯದಿಂದ ನಿರೂಪಿಸುತ್ತಾರೆ. ಅವರ ಕಾವ್ಯವು ಸರ್ವಕಾಲಿಕ ಸತ್ಯಗಳನ್ನು ಒಳಗೊಂಡಂತ ಅದ್ವಿತೀಯ ಕೃತಿ. ಅವರ ಜನ್ಮದಿನಾಚರಣೆಯ ಅಂಗವಾಗಿ ಡಮರುಗ ರಂಗತಂಡವು ಮೊದಲಬಾರಿ ಬಯಲಾಟದಲ್ಲಿ 'ಲವಕುಶ' ಆಟವನ್ನು ಸಿದ್ಧಗೊಳಿಸಿದ್ದಾರೆ.

ದಿನಾಂಕ 25–10–26ನೇ ಭಾನುವಾರ ಸಂಜೆ 6 ಗಂಟೆಗೆ ಮೆಳೇಹಳ್ಳಿಯ ವಿ.ರಾಮಮೂರ್ತಿ ರಂಗಸ್ಥಳದಲ್ಲಿ ಆಟದ ಗೆಜ್ಜೆಪೂಜೆ ನೆರವೇರಿಸಲಾಯಿತು. ಆಟಕ್ಕೆ ಹಿರಿಯ ಭಾಗವತ ಲಿಂಗಪ್ಪ ಹೊಸಮನೆಹಳ್ಳಿ ಮದ್ದಳೆ ಕಲಾವಿದ ಪುಟ್ಟಸ್ವಾಮಯ್ಯ ಹಿಮ್ಮೇಳದಲ್ಲಿ ನಾಗರಾಜ ಸಾಥ್ ನೀಡಿದರು. ಆಟವನ್ನು ದೇಸಿ ರಂಗನಿರ್ದೇಶಕರಾದ ಮೇಲೇಹಳ್ಳಿ ದೇವರಾಜ್ ನಿರ್ದೇಶಿಸಿದ್ದು ಪ್ರಕಾಶ್ ಮೆಳೇಹಳ್ಳಿ, ಡಮರುಗ ಉಮೇಶ್, ಚಿನ್ಮಯ, ಲಯ, ಸೃಷ್ಟಿ, ಧೃವ, ದ್ರೋಣ ಭಾಗವ ಬಣ್ಣ ಹಚ್ಚಿದ್ದರು.

3 ಪ್ರತ್ಯೇಕ ಕಾಣೆ ಪ್ರಕರಣ ದಾಖಲು

ಕೋರಾ ಪೊಲೀಸ್ ಠಾಣೆ : : ತಾಲ್ಲೂಕಿನ ಕೋರಾ ಪೊಲೀಸ್ ಠಾಣೆಯಲ್ಲಿ 3 ಪ್ರತ್ಯೇಕ ಕಾಣೆ ಪ್ರಕರಣಗಳು ದಾಖಲಾಗಿವೆ ಎಂದು ಪೊಲೀಸ್ ಸಬ್ ಇನ್ಸ್‌ಪೆಕ್ಟರ್ ತಿಳಿಸಿದ್ದಾರೆ.

ಪ್ರಕರಣ–1: ಹಂಚಿಹಳ್ಳಿ ಗ್ರಾಮದ ಸುಮಾರು 42 ವರ್ಷದ ಮಂಜುಳ ಎಂಬ ಮಹಿಳೆಯು ಕಾಣೆಯಾಗಿದ್ದಾಳೆ. ಈಕೆಯು 5.5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ, ಕೋಲು ಮುಖ ಹೊಂದಿದ್ದು, ಬಲ ಮೊಣಕೈನಲ್ಲಿ 'ಖ' ಎಂಬ ಅಚ್ಚೆ ಗುರುತು ಇರುತ್ತದೆ.

ಪ್ರಕರಣ–2: ಕೊರಟಗೆರೆ ತಾಲ್ಲೂಕು ಬುಕ್ಕಾಪಟ್ಟಣ ಗ್ರಾಮದ ಸುಮಾರು 28 ವರ್ಷದ ಮಾಲಾಶ್ರೀ ಎಂಬ ಮಹಿಳೆಯು ವಸಂತನರಸಾಪುರದಿಂದ ಕಾಣೆಯಾಗಿದ್ದು, ಈಕೆಯು 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ ಹೊಂದಿದ್ದು, ಬಲ ಮುಖದ ತುಟಿಯ ಕೆಳಗೆ ಕಪ್ಪು ಮಚ್ಚೆ ಇರುತ್ತದೆ.

ಪ್ರಕರಣ–3: ಕಲ್ಲುಟ್ ಕುಂಟೆ ಗ್ರಾಮದ ಸುಮಾರು 45 ವರ್ಷದ ಚಿಕ್ಕಹನುಮಕ್ಕ ಎಂಬ ಮಹಿಳೆಯು ಕಾಣೆಯಾಗಿದ್ದು, ಮಹಿಳೆಯು 5 ಅಡಿ ಎತ್ತರ, ಕೋಲು ಮುಖ, ತೆಳ್ಳನೆಯ ಶರೀರ, ಕಪ್ಪು ಮೈಬಣ್ಣ ಹೊಂದಿದ್ದು, ಎಡ ಮೊಣಕೈ ಮೇಲೆ ಸೂರ್ಯನ ಆಕಾರವಿರುವ ಅಚ್ಚೆ ಗುರುತು ಇರುತ್ತದೆ.

ಕಾಣೆಯಾದವರಬಗ್ಗೆ ಸುಳಿವುಸಿಕ್ಕಲ್ಲಿಕೂಡಲೇ ದೂ.ವಾ.ಸಂ.0816–2278000/ 2272340/ 2275301/ 2242006, ಮೊ.ಸಂ. 9480802900–20–31–49ನ್ನು ಸಂಪರ್ಕಿಸಬೇಕೆಂದು ಅವರು ಮನವಿ ಮಾಡಿದ್ದಾರೆ.

ನಿರಮ್ ಉಪಶಮನ ಆರೈಕೆ ಕೇಂದ್ರಕ್ಕೆ ವೀಲ್‌ಚೇರ್ ವಿತರಣೆ

ಸೂರ್ಯಪ್ರಗತಿನ್ಯೂಸ್.ಕಾಂ



ತುಮಕೂರು: ನಿರಮ್ ಉಪಶಮನ ಆರೈಕೆ ಕೇಂದ್ರದಲ್ಲಿ ಚಿಕಿತ್ಸೆ ಹಾಗೂ ಆರೈಕೆ ಪಡೆಯುತ್ತಿರುವ ರೋಗಿಗಳಿಗೆ ದೈನಂದಿನ ಚಟುವಟಿಕೆಗಳಲ್ಲಿ ನೆರವಾಗುವುದು ಮತ್ತು ಅವರ ಸಂಚಾರವನ್ನು ಸುಗಮಗೊಳಿಸುವುದು ವೀಲ್‌ಚೇರ್‌ಗಳ ಪ್ರಮುಖ ಉದ್ದೇಶವಾಗಿದೆ. ದೈಹಿಕವಾಗಿ ತೊಂದರೆ ಅನುಭವಿಸುತ್ತಿರುವವರು ಹಾಗೂ ನಡೆದಾಡಲು ಅಸಮರ್ಥರಾಗಿರುವವರಿಗೆ ಇಂತಹ ಸಾಧನಗಳು ಹೆಚ್ಚಿನ ಅನುಕೂಲ ಒದಗಿಸುತ್ತವೆ. ಈ ನಿಟ್ಟಿನಲ್ಲಿ ರೋಟರಿ ತುಮಕೂರು ಪ್ರೇರಣಾ ವತಿಯಿಂದ ವೀಲ್‌ಚೇರ್ ವಿತರಿಸಿರುವುದು ಗಮನಾರ್ಹವಾಗಿದೆ ಎಂದು ರೋಟರಿ ತುಮಕೂರು ಪ್ರೇರಣಾ ಸದಸ್ಯ ರೊ.ದೀಪಕ್‌ರವರು ತಿಳಿಸಿದರು.

ರೋಟರಿ ತುಮಕೂರು ಪ್ರೇರಣಾ ವತಿಯಿಂದ ನಗರದ ನಿರಮ್ (ರಿಮ್) ಉಪಶಮನ ಆರೈಕೆ ಕೇಂದ್ರಕ್ಕೆ ವೀಲ್ ಚೇರ್ ವಿತರಿಸುವ ಮೂಲಕ ಸಮಾಜಮುಖಿ ಸೇವಾ ಕಾರ್ಯವನ್ನು ಅ.27ರಂದು ಮಂಗಳವಾರ ಹಮ್ಮಿಕೊಳ್ಳಲಾಯಿತು. ರೋಟರಿ ತುಮಕೂರು ಪ್ರೇರಣಾದ ಸದಸ್ಯರಾದ ರೊ.ದೀಪಕ್ ಅವರು ವೀಲ್‌ಚೇರ್ ವಿತರಿಸಿ, ಆರೈಕೆ ಕೇಂದ್ರದ ರೋಗಿಗಳಿಗೆ ಅನುಕೂಲ ಕಲ್ಪಿಸುವ ಕಾರ್ಯಕ್ಕೆ ಕೈಜೋಡಿಸಿದರು. ಅವರ ಈ ಮಾನವೀಯ ಸೇವಾ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತವಾಗಿದೆ.

ಕಾರ್ಯಕ್ರಮದಲ್ಲಿ ರೋಟರಿ ತುಮಕೂರು ಪ್ರೇರಣಾ ಅಧ್ಯಕ್ಷರಾದ ರಘು.ಎಸ್‌ರವರು ಮಾತನಾಡುತ್ತಾ ಸಮಾಜದಲ್ಲಿ ಅಗತ್ಯವಿರುವವರಿಗೆ ನೆರವಾಗುವುದು, ಅಸಹಾಯಕರಿಗೆ ಬೆಂಬಲ ನೀಡುವುದು ಹಾಗೂ ಮಾನವೀಯ ಮೌಲ್ಯಗಳನ್ನು ಎತ್ತಿಹಿಡಿಯುವುದು ರೋಟರಿ ಸಂಸ್ಥೆಯ ಪ್ರಮುಖ ಸೇವಾ ಆಶಯಗಳಾಗಿವೆ. ಈ ಆಶಯದಂತೆ ರೋಟರಿ ತುಮಕೂರು ಪ್ರೇರಣಾ ಘಟಕವು ವಿವಿಧ ಸಮಾಜಮುಖಿ ಚಟುವಟಿಕೆಗಳ ಮೂಲಕ ಸಾರ್ವಜನಿಕ ಸೇವೆಯಲ್ಲಿ ತೊಡಗಿಸಿಕೊಂಡಿದೆ. ಇಂತಹ ಸೇವಾ ಕಾರ್ಯಗಳು ರೋಗಿಗಳಿಗೆ ನೆರವಾಗುವುದರ ಜೊತೆಗೆ ಸಮಾಜದಲ್ಲಿ ಪರಸ್ಪರ ಸಹಕಾರ, ಕಾಳಜಿ ಮತ್ತು ಸೇವಾ ಮನೋಭಾವವನ್ನು ಬೆಳೆಸಲು ಸಹಕಾರಿಯಾಗುತ್ತವೆ.

ಕಾರ್ಯಕ್ರಮದಲ್ಲಿ ನಿರಮ್ ಉಪಶಮನ ಆರೈಕೆ ಕೇಂದ್ರದ ಆಡಳಿತಾಧಿಕಾರಿ ರಮೇಶ್.ಟಿ.ಎಸ್. ಅವರು ಮಾತನಾಡಿ, ವೀಲ್‌ಚೇರ್ ವಿತರಣೆಯಂತಹ ಸಣ್ಣದಾಗಿ ಕಾಣುವ ಸಹಾಯವೂ ಅಗತ್ಯವಿರುವ ವ್ಯಕ್ತಿಗಳ ದೈನಂದಿನ ಬದುಕಿನಲ್ಲಿ ಮಹತ್ವದ ಬದಲಾವಣೆಯನ್ನು ತರಬಲ್ಲದು. ವಿಶೇಷವಾಗಿ ನಡೆಯಲು ಕಷ್ಟಪಡುವ ರೋಗಿಗಳಿಗೆ ಚಲನ–ವಲನದ ಅನುಕೂಲ ಕಲ್ಪಿಸುವುದು ಅವರ ಆರೈಕೆಯನ್ನು ಸುಗಮಗೊಳಿಸಲು ಸಹಕಾರಿಯಾಗುತ್ತದೆ. ಈ ಹಿನ್ನೆಲೆಯಲ್ಲಿ ರೋಟರಿ ತುಮಕೂರು ಪ್ರೇರಣಾದ ಈ ಉಪಕ್ರಮವು ಸಮಾಜಮುಖಿ ಕಾರ್ಯಗಳಿಗೆ ಮಾದರಿಯಾಗಿದೆ.

ಕಾರ್ಯಕ್ರಮದಲ್ಲಿ ರೋಟರಿ ತುಮಕೂರು ಪ್ರೇರಣಾ ಕಾರ್ಯನಿರ್ವಾಹಕ ಕಾರ್ಯದರ್ಶಿ ಹಾಗೂ ವರದಿಗಾರ ರೊ.ಆನಂದ್.ಎನ್., ರೊ.ಅರುಣ್, ನಿರಮ್ ಉಪಶಮನ ಆರೈಕೆ ಕೇಂದ್ರದ ಅಭಿರಾಮಿ.ಪಿ.ಸಿ., ಶುಶ್ರೂಷಕ ಅಧೀಕ್ಷಕ ಶಿವಕುಮಾರ್ ಹಾಗೂ ಸಿಬ್ಬಂದಿ ವರ್ಗದವರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಟ್ರಸ್ಟ್ ಉದ್ಘಾಟನೆ; ಕುಂಭ–ಕಳಶ ಮೆರವಣಿಗೆ, ಅನ್ನ ಸಂತರ್ಪಣೆ

ಸೂರ್ಯಪ್ರಗತಿನ್ಯೂಸ್.ಕಾಂ



ಕೊರಟಗೆರೆ : ತಾಲ್ಲೂಕಿನ ಚನ್ನರಾಯನದುರ್ಗ ಹೋಬಳಿಯ ಮರೇನಾಯಕನಹಳ್ಳಿ ಗ್ರಾಮದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಟ್ರಸ್ಟ್ (ರಿ.) ಹಾಗೂ ಗ್ರಾಮಸ್ಥರ ಸಹಯೋಗದಲ್ಲಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತೋತ್ಸವವನ್ನು ಅದ್ಧೂರಿಯಾಗಿ ಆಚರಿಸಲಾಯಿತು. ಇದೇ ಸಂದರ್ಭದಲ್ಲಿ ನೂತನವಾಗಿ ಸ್ಥಾಪಿಸಲಾದ ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಟ್ರಸ್ಟ್‌ನ ನಾಮಫಲಕವನ್ನು ಉದ್ಘಾಟಿಸಲಾಯಿತು.

ಜಯಂತೋತ್ಸವದ ಅಂಗವಾಗಿ ವಾಲ್ಮೀಕಿ ಸಮಾಜದ ಮಹಿಳೆಯರು ಕುಂಭ–ಕಳಶಗಳನ್ನು ಹೊತ್ತು, ಶ್ರೀ ಮಹರ್ಷಿ ವಾಲ್ಮೀಕಿ ಅವರ ಭಾವಚಿತ್ರದೊಂದಿಗೆ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು. ಮೆರವಣಿಗೆಯಲ್ಲಿ ಹೋರಿ ಮತ್ತು ಟಗರುಗಳು ಭಾಗವಹಿಸಿ ಸಾರ್ವಜನಿಕರ ಗಮನ ಸೆಳೆದವು. ಯುವಕರು ಪಟಾಕಿ ಸಿಡಿಸಿ, ಸಿಹಿ ಹಂಚುವ ಮೂಲಕ ಸಂಭ್ರಮಿಸಿದರು. ಕಾರ್ಯಕ್ರಮಕ್ಕೆ ಆಗಮಿಸಿದ್ದ ಸಾರ್ವಜನಿಕರಿಗೆ ಅನ್ನ ಸಂತರ್ಪಣೆಯ ವ್ಯವಸ್ಥೆ ಮಾಡಲಾಗಿತ್ತು.

ಗ್ರಾಮದಲ್ಲಿ ಪ್ರಥಮ ಬಾರಿಗೆ ಆಯೋಜಿಸಿದ್ದ ಜಯಂತೋತ್ಸವದ ಮೂಲಕ ಶ್ರೀ ಮಹರ್ಷಿ ವಾಲ್ಮೀಕಿ ಅವರ ಆದರ್ಶಗಳು, ಜೀವನ ಮೌಲ್ಯಗಳು ಹಾಗೂ ರಾಮಾಯಣದ ಸಂದೇಶಗಳನ್ನು ಸ್ಮರಿಸಲಾಯಿತು. ಸಮಾಜದ ಸಂಘಟನೆ, ಯುವಕರ ಅಭಿವೃದ್ಧಿ, ಶಿಕ್ಷಣಕ್ಕೆ ಉತ್ತೇಜನ, ಮಹಿಳಾ ಸಬಲೀಕರಣ, ಸಮಾನತೆ ಮತ್ತು ಸಾರ್ವಜನಿಕ ಸೇವೆಯ ಉದ್ದೇಶದಿಂದ ನೂತನ ಟ್ರಸ್ಟ್‌ಗೆ ಚಾಲನೆ ನೀಡಲಾಯಿತು. ಎಲ್ಲ ವರ್ಗದ ಜನರನ್ನು ಒಳಗೊಂಡು ಗ್ರಾಮದಲ್ಲಿ ಸ್ವಚ್ಛತೆ, ಶಿಕ್ಷಣ, ಆರೋಗ್ಯ ಹಾಗೂ ಸಾಮಾಜಿಕ ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಸಂಕಲ್ಪವನ್ನು ವ್ಯಕ್ತಪಡಿಸಲಾಯಿತು.

ಸಮಾಜದ ಅಭಿವೃದ್ಧಿಗೆ ಸರ್ಕಾರದ ಸಹಕಾರ ಅಗತ್ಯ : ಹುಲಿರಾಮಯ್ಯ ; ವಾಲ್ಮೀಕಿ ಸಮಾಜದ ಹಿರಿಯ ಮುಖಂಡ ಹಾಗೂ ಮಾಜಿ ಗ್ರಾಮ ಪಂಚಾಯಿತಿ ಸದಸ್ಯ ಹುಲಿರಾಮಯ್ಯ ಮಾತನಾಡಿ, ಗ್ರಾಮದಲ್ಲಿ ಪ್ರಥಮ ಬಾರಿಗೆ ಗ್ರಾಮಸ್ಥರು ಹಾಗೂ ವಾಲ್ಮೀಕಿ ಸಮಾಜದ ಬಂಧುಗಳು ಒಗ್ಗೂಡಿ ಶ್ರೀ ಮಹರ್ಷಿ ವಾಲ್ಮೀಕಿ ಜಯಂತಿಯನ್ನು ವೈಭವದಿಂದ ಆಚರಿಸುತ್ತಿರುವುದು ಸಂತಸದ ಸಂಗತಿ. ಮುಂದಿನ ದಿನಗಳಲ್ಲಿ ಸರ್ಕಾರ ಮತ್ತು ಜನಪ್ರತಿನಿಧಿಗಳು ಗ್ರಾಮ ಹಾಗೂ ಟ್ರಸ್ಟ್‌ನ ಅಭಿವೃದ್ಧಿಗೆ ಹೆಚ್ಚಿನ ಸಹಕಾರ ನೀಡಬೇಕು. ಸಮಾಜ ಕಲ್ಯಾಣ ಇಲಾಖೆಯು ಟ್ರಸ್ಟ್‌ನ ಕಾರ್ಯ ಚಟುವಟಿಕೆಗಳನ್ನು ಗುರುತಿಸಿ, ಯುವಕರ ಆರ್ಥಿಕ ಮತ್ತು ಶೈಕ್ಷಣಿಕ ಪ್ರಗತಿಗೆ ನೆರವು ನೀಡಬೇಕು ಎಂದು ಮನವಿ ಮಾಡಿದರು. ಜೊತೆಗೆ, ಸಮಾಜದ ಹಿಂದುಳಿದ ಕುಟುಂಬಗಳು, ಮಹಿಳೆಯರು ಹಾಗೂ ಮಕ್ಕಳಿಗೆ ಸರ್ಕಾರದ ಸೌಲಭ್ಯಗಳು ತಲುಪುವಂತೆ ಸಾಮೂಹಿಕವಾಗಿ ಪ್ರಯತ್ನಿಸಬೇಕು ಎಂದು ಹೇಳಿದರು.

ಗ್ರಾಮದ ಸರ್ವತೋಮುಖ ಅಭಿವೃದ್ಧಿಗೆ ಶ್ರಮ: ಕಾಂತರಾಜ್ ಟ್ರಸ್ಟ್‌ನ ನಿರ್ದೇಶಕ ಹಾಗೂ ಪ್ರಾಧ್ಯಾಪಕ ಕಾಂತರಾಜ್ ಮಾತನಾಡಿ, ಮರೇನಾಯಕನಹಳ್ಳಿ ಗ್ರಾಮದಲ್ಲಿ ಪ್ರಥಮ ಬಾರಿಗೆ ವಾಲ್ಮೀಕಿ ಜಯಂತೋತ್ಸವ ಆಚರಿಸುವುದರೊಂದಿಗೆ ಶ್ರೀ ಮಹರ್ಷಿ ವಾಲ್ಮೀಕಿ ಸೇವಾ ಟ್ರಸ್ಟ್‌ನ್ನು ಉದ್ಘಾಟಿಸಿ ನಾಮಫಲಕ ಅನಾವರಣಗೊಳಿಸಲಾಗಿದೆ. ಮುಂದಿನ ದಿನಗಳಲ್ಲಿ ಗ್ರಾಮದ ಸರ್ವತೋಮುಖ ಅಭಿವೃದ್ಧಿ ಹಾಗೂ ಯುವಕರ ಪ್ರಗತಿಗಾಗಿ ಟ್ರಸ್ಟ್ ಶ್ರಮಿಸಲಿದೆ. ಶಿಕ್ಷಣ, ಉದ್ಯೋಗ, ಆರೋಗ್ಯ, ಪರಿಸರ ಸಂರಕ್ಷಣೆ ಮತ್ತು ಸಾಮಾಜಿಕ ಸಮಾನತೆಯ ಕ್ಷೇತ್ರಗಳಲ್ಲಿ ಜನಪರ ಕಾರ್ಯಕ್ರಮಗಳನ್ನು ರೂಪಿಸಲಾಗುವುದು. ಸಮಾಜದ ಮುಖಂಡರು ಮತ್ತು ಜನಪ್ರತಿನಿಧಿಗಳು ಗ್ರಾಮದ ಅಭಿವೃದ್ಧಿಗೆ ಸಹಕಾರ ನೀಡಬೇಕು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಟ್ರಸ್ಟ್‌ನ ಅಧ್ಯಕ್ಷ ಮಂಜುನಾಥ್ ಎಂ.ಎಸ್., ಉಪಾಧ್ಯಕ್ಷ ರಂಗಧಾಮಯ್ಯ, ಕಾರ್ಯದರ್ಶಿ ರವಿಕುಮಾರ್, ಖಜಾಂಚಿ ಮನೋಜ್, ಸಹಕಾರ್ಯದರ್ಶಿ ರಾಕೇಶ್, ನಿರ್ದೇಶಕರಾದ ಕಾಂತರಾಜ್, ರಂಗರಾಜ್, ಪ್ರದೀಪ್, ಸುಪ್ರೀತ್, ರಂಜಿತ್, ಕಾಮರಾಜ್, ಮಾರುತಿ, ನಂದನ್, ಅನಿಲ್ ಕುಮಾರ್, ಜೈಕುಮಾರ್ ಹಾಗೂ ಲೋಕೇಶ್ ಸೇರಿದಂತೆ ಹಿರಿಯ ಮುಖಂಡರಾದ ಕಾವಣ್ಣ, ಮುದ್ದರಂಗಪ್ಪ, ದೊಡ್ಡಯ್ಯ, ಚಂದ್ರಯ್ಯ, ನಂಜಪ್ಪ, ಪರಮೇಶ್, ಮಂಜುನಾಥ್, ಶಿವರಾಜ್, ಬೊಮ್ಮಲಿಂಗಯ್ಯ ಮತ್ತು ಲಕ್ಷ್ಮಯ್ಯ ಉಪಸ್ಥಿತರಿದ್ದರು. ಗ್ರಾಮದ ಮುಖಂಡರು, ಯುವಕರು ಹಾಗೂ ಗ್ರಾಮಸ್ಥರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದಲಿತರ ಮೇಲಿನ ದೌರ್ಜನ್ಯ ತಡೆಗೆ ಡಿಸಿಆರ್‌ಇ ಸೆಲ್ ವಿಫಲ; ಚಿಮಲ್ಲಿಕಾರ್ಜುನ್ ಆಕ್ರೋಶ

ಸೂರ್ಯಪ್ರಗತಿನ್ಯೂಸ್.ಕಾಂ

ರಾಮನಗರ : ದಲಿತರ ಮೇಲಿನ ದೌರ್ಜನ್ಯ ತಡೆಗಟ್ಟಲು ಪೊಲೀಸ್ ಇಲಾಖೆ ಹಾಗೂ ಡಿಸಿಆರ್‌ಇ ಸೆಲ್ ಸಂಪೂರ್ಣ ವಿಫಲವಾಗಿದೆ ಎಂದು ಧಮ್ಮದೀವಿಗೆ ಟ್ರಸ್ಟ್‌ನ ಅಧ್ಯಕ್ಷ ಮಲ್ಲಿಕಾರ್ಜುನ್ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಡಿಸಿಆರ್‌ಬಿ ಸೆಲ್ ತೋರಿಕೆಗೆ ಮಾತ್ರವಷ್ಟೇ ಪ್ರಕರಣಗಳನ್ನು ದಾಖಲು ಮಾಡುತ್ತಿದ್ದು, ಇದುವರೆಗೆ ಯಾವೊಬ್ಬ ಆರೋಪಿಯನ್ನೂ ಸಹ ಬಂಧಿಸಿ, ಕಾನೂನು ಕ್ರಮ ಕೈಗೊಂಡಿಲ್ಲ ಎಂದು ಆರೋಪಿಸಿದರು.

ಮುಖ್ಯಮಂತ್ರಿ ಸ್ವಕ್ಷೇತ್ರ ಕನಕಪುರ, ಹಾರೋಹಳ್ಳಿ ಸೇರಿದಂತೆ ದಕ್ಷಿಣ ಜಿಲ್ಲೆಯಾದ್ಯಂತ 45ಕ್ಕೂ ಹೆಚ್ಚು ದಲಿತರ ಮೇಲಿನ ಗಂಭೀರ ದೌರ್ಜನ್ಯ ಪ್ರಕರಣಗಳು ನಡೆದಿವೆ. ನಿಷ್ಕ್ರಿಯಗೊಂಡಿರುವ ಡಿಸಿಆರ್‌ಇ ಸೆಲ್ ದೌರ್ಜನ್ಯ ನಡೆಯದಂತೆ ತಡೆಯುವುದಿರಲಿ ನಂತರವೂ ದೌರ್ಜನ್ಯ ನಡೆಸಿದ ದುಷ್ಕರ್ಮಿಗಳ ಹೆಡೆಮುರಿ ಕಟ್ಟುವ ಮೂಲಕ ಸಂತ್ರಸ್ತರಿಗೆ ನ್ಯಾಯ ಒದಗಿಸುವಲ್ಲಿ ವಿಫಲವಾಗಿದೆ ಎಂದು ಕಿಡಿಕಾರಿದರು.

ತಾಮಸಂದ್ರ ಗ್ರಾಮದಲ್ಲಿ ಸರ್ಕಾರದಿಂದ ಮಂಜೂರಾಗಿದ್ದ ನಿವೇಶನದಲ್ಲಿ ವಾಸವಿದ್ದ ಸಿದ್ದಗಂಗಮ್ಮ ಎಂಬ ಮಹಿಳೆಯ ಗುಡಿಸಲಿಗೆ ಬೆಂಕಿ ಇಟ್ಟು, ಅವರ ಪುತ್ರನಿಗೆ ಕೈ ಕತ್ತರಿಸಿ, ಮಾರಣಾಂತಿಕ ಹಲ್ಲೆ ನಡೆಸಿದ್ದಾರೆ. ತೋರಿಕೆಗೆ ಮಾತ್ರವೇ ಆರೋಪಿಗಳನ್ನು ಬಂಧಿಸಿದ್ದು, ಜಾಮೀನು ಅರ್ಜಿಗೆ ಸರ್ಕಾರಿ



ಅಭಿಯೋಜಕರು ಆಕ್ಷೇಪಣೆಯನ್ನೂ ಸಲ್ಲಿಸಿಲ್ಲ. ಹೀಗಾದರೆ ಸಂತ್ರಸ್ತರಿಗೆ ನ್ಯಾಯ ದೊರಕಲು ಹೇಗೆ ಸಾಧ್ಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಒಬ್ಬರಿಗೂ ಶಿಕ್ಷೆಯಾಗಿಲ್ಲ : ಸಿದ್ದಗಂಗಮ್ಮ ಪ್ರಕರಣವೂ ಸೇರಿದಂತೆ ಚುಂಚಿ ಕಾಲೋನಿಯಲ್ಲಿ ಯುವತಿ ಮೇಲೆ ನಡೆದ ಅತ್ಯಾಚಾರ ಮತ್ತು ಕೊಲೆಯತ್ನ ಪ್ರಕರಣ, ಹಾರೋಶಿವನಹಳ್ಳಿ ಗ್ರಾಮದಲ್ಲಿ ಗಣೇಶ ವಿಸರ್ಜನೆ ವೇಳೆ ದಲಿತರ ಮೇಲೆ ನಡೆದಿರುವ ದೌರ್ಜನ್ಯ, ತಾಮಸಂದ್ರ, ಛತ್ರ ಗ್ರಾಮದಲ್ಲಿ ನಡೆದ ಪ್ರಕರಣ ಸೇರಿದಂತೆ ತಾಲೂಕಿನ ಪ್ರತಿ ಗ್ರಾಮದಲ್ಲೂ ಒಂದಲ್ಲಾ ಒಂದು ಪ್ರಕರಣ ನಡೆದಿವೆ. ಆದರೂ ಪೊಲೀಸರು, ಡಿಸಿಆರ್‌ಇ ಸೆಲ್ ಒಬ್ಬರಿಗೂ ಶಿಕ್ಷೆ ಕೊಡಿಸಿಲ್ಲ ಎಂದು ದೂರಿದರು.

ಆರೋಪಿಗಳ ಆಮಿಷಕ್ಕೆ ಬಲಿ : ಪ್ರಕರಣ ನಡೆದಾಗ ಮಹಜರು ನಡೆಸಲು ಮಾತ್ರ ಪ್ರತ್ಯಕ್ಷರಾಗುವ ಡಿಸಿಆರ್‌ಇ ಸೆಲ್‌ನ ಡಿವೈಎಸ್‌ಪಿ ಅವರು, ಆರೋಪಿಗಳ ಬಂಧನ, ಜಾಮೀನು ನೀಡದಂತೆ ತಡೆಯುವ, ಕಾನೂನು ಕುಣಿಕೆಯನ್ನು ಬಿಗಿಗೊಳಿಸುವ, ಜೈಲಿಗೆ ಕಳುಹಿಸುವ ಮೂಲಕ ಅಸ್ಪೃಶ್ಯತೆ ಆಚರಣೆ ತಡೆಯುವ ಹಾಗೂ ದಲಿತರ ಮೇಲಿನ ದೌರ್ಜನ್ಯವನ್ನು ತಡೆಗಟ್ಟುವ ಬದಲು ಆರೋಪಿಗಳ ಆಮಿಷಕ್ಕೆ ಬಲಿಯಾಗಿ ಸರ್ಕಾರ ವಹಿಸಿರುವ ಜವಾಬ್ದಾರಿಯನ್ನು ಸಂಪೂರ್ಣ ಮರೆತಿದ್ದಾರೆ ಎಂದರು.

ಪೊಲೀಸರ ಎದುರೇ ದುಷ್ಕರ್ಮಿಗಳ ಅಟ್ಟಹಾಸ: ಕಳೆದ ತಿಂಗಳ 21ರಂದು ನಾಗರತ್ನ ಎಂಬ ಮಹಿಳೆ ತನ್ನ ಮನೆಯಲ್ಲಿ ಮಲಗಿದ್ದಾಗ ರಾತ್ರಿ ಆಗಮಿಸಿದ ಬಾಳೇಗೌಡ, ಗುರು, ಶಂಕರ್ ವೀರಭದ್ರಯ್ಯ ಸೇರಿದಂತೆ ಸುಮಾರು 20 ಮಂದಿಯ ತಂಡ ಕಾಂಪೌಂಡ್ ಸಹಿತ ಮನೆಯನ್ನೇ ಜೆಸಿಬಿಯಿಂದ ತೆರವುಗೊಳಿಸಿದ್ದಾರೆ. ಸ್ಥಳಕ್ಕಾಗಮಿಸಿದ ಪೊಲೀಸರ ಎದುರೇ ಸುಮಾರು ಎರಡು ಗಂಟೆಗೂ ಹೆಚ್ಚು ಕಾಲ ದುಷ್ಕರ್ಮಿಗಳು ಅಟ್ಟಹಾಸ ಮೆರೆದಿದ್ದಾರೆ. ತಡೆಯಲು ಬಂದ ಮಹಿಳೆಯ ಮೇಲೆ ಅತ್ಯಾಚಾರ ಯತ್ನ ನಡೆಸಿದ್ದಾರೆ. ಆಕೆಯ ಗಂಡನನ್ನು ಮನಸೋಯಿಚ್ಛೆ ಥಳಿಸಿದ್ದಾರೆ ಎಂದು ಕಿಡಿಕಾರಿದರು.

ಈ ಸಂಬಂಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದ್ದರೂ ಆರೋಪಿಗಳನ್ನು ಪತ್ತೆಹಚ್ಚುವಲ್ಲಿ ಪೊಲೀಸರು ವಿಫಲರಾಗಿದ್ದಾರೆ. ಆರೋಪಿಗಳು ಹಾಡಹಗಲೇ ಪೊಲೀಸ್ ಠಾಣೆಯ ಎದುರೇ ಸುತ್ತಾಡುತ್ತಿದ್ದರೂ ಬಂಧಿಸದೆ ಬೇಜವಾಬ್ದಾರಿ ತೋರುತ್ತಿದ್ದಾರೆ ಎಂದರು.

ದೂರು ದಾಖಲಿಸಲು ನಿರಾಕರಣೆ: ಸುಳ್ಳು ದಾಖಲೆಗಳನ್ನು ಸೃಷ್ಟಿಸಿ ಮುನಿರಾಜು ಎಂಬ ವ್ಯಕ್ತಿಯ ಜಮೀನು ಕಬಳಿಕೆಗೆ ದುಷ್ಕರ್ಮಿಗಳು ಯತ್ನಿಸಿದ್ದಾರೆ. ಪ್ರಕರಣ ನ್ಯಾಯಾಲಯದ ಮೆಟ್ಟಿಲೇರಿ, ಮುನಿರಾಜು ಪರವಾಗಿ ನ್ಯಾಯಾಲಯ ತೀರ್ಪಿತ್ತಿದೆ. ಮುನಿರಾಜು ಮನೆಯ ಮೇಲೆ ಕಲ್ಲು ತೂರಾಟ ಮಾಡಿ, ಆತನ ಮೇಲೆ ಟ್ರ್ಯಾಕ್ಟರ್ ಹತ್ತಿಸಿ ಕೊಲೆಗೂ ಯತ್ನಿಸಿದ್ದಾರೆ. ಹಾರೋಹಳ್ಳಿ ಠಾಣೆ ಪೊಲೀಸರು ಈ ಸಂಬಂಧ ದೂರು ದಾಖಲಿಸಿಕೊಳ್ಳಲು ನಿರಾಕರಿಸುತ್ತಿದ್ದಾರೆ ಎಂದು ಮಲ್ಲಿಕಾರ್ಜುನ್ ದೂರಿದರು.

ಬಡ ದಲಿತರಿಗೆ ರಕ್ಷಣೆ ನೀಡಬೇಕಾದ ಪೊಲೀಸ್ ಠಾಣೆಗಳು ರಿಯಲ್ ಎಸ್ಟೇಟ್ ಮಾಫಿಯಾಕೋರರ, ಶ್ರೀಮಂತರ, ರಾಜಕಾರಣಿಗಳ ಪರ ವಕಾಲತ್ತು ವಹಿಸಿದರೆ ನೊಂದವರಿಗೆ ನ್ಯಾಯ ದೊರೆಯಲು ಹೇಗೆ ಸಾಧ್ಯ ಎಂದು ಪ್ರಶ್ನಿಸಿದ ಮಲ್ಲಿಕಾರ್ಜುನ್, ಇಲ್ಲಸಲ್ಲದ ನೆಪ ಹೇಳಿ ಆರೋಪಿಗಳ ಬಂಧನಕ್ಕೆ ಹಿಂದೇಟು ಹಾಕುತ್ತಿದ್ದಾರೆ ಎಂದರು.

ಪೊಲೀಸರನ್ನು ಕಂಡರೆ ಭಯವಿಲ್ಲ: ಪೊಲೀಸ್ ಇಲಾಖೆಯ ಬೇಜವಾಬ್ದಾರಿತನದ ಲಾಭ ಪಡೆಯುತ್ತಿರುವ ಕ್ರಿಮಿನಲ್‌ಗಳು ಹಾಡಹಗಲೇ ಗುಂಪುಗೂಡಿ ಕುಡಿದು, ರಸ್ತೆಯಲ್ಲಿ ಸಂಚರಿಸುವ ಮಹಿಳೆಯರಿಗೆ ತೊಂದರೆ ನೀಡುತ್ತಿದ್ದಾರೆ. ಇತ್ತೀಚೆಗೆ ರಸ್ತೆ ಬದಿ ಮದ್ಯಪಾನ ಮಾಡುತ್ತಿದ್ದ 80 ಮಂದಿಯನ್ನು ಬಂಧಿಸಿರುವುದೇ ಇದಕ್ಕೆ ಸಾಕ್ಷಿ. ಪೊಲೀಸರನ್ನು ಕಂಡರೆ ದುಷ್ಕರ್ಮಿಗಳಿಗೆ ಭಯವೇ ಇಲ್ಲದಂತಾಗಿದೆ ಎಂದು ಹೇಳಿದರು.

ರಾಜಗೋಪಾಲ್ ಎಂಬ ದಲಿತ ಯುವಕನನ್ನು ನಡುರಸ್ತೆಯಲ್ಲೇ ಕೊಚ್ಚಿ ಭೀಕರವಾಗಿ ಕೊಂದ ದುಷ್ಕರ್ಮಿಗಳನ್ನು, ಹನೀಶ್ ಕುಮಾರ್ ಎಂಬ ಯುವಕನ ಕೈ ಕತ್ತರಿಸಿದ ಆರೋಪಿಗಳಿಗೆ ಶಿಕ್ಷೆ ಕೊಡಿಸುವಲ್ಲಿ ವಿಫಲರಾಗಿದ್ದಾರೆ. ಮಳಗಾಳು ಗ್ರಾಮದಲ್ಲಿ ಮನೆಗೆ ನುಗ್ಗಿ ಹಲ್ಲೆ ನಡೆಸಿದ ಆರೋಪಿಗಳ ಪರ ಪೊಲೀಸರೇ ವಕಾಲತ್ತು ವಹಿಸಿ, ರಾಜಿ ಪಂಚಾಯಿತಿ ಮಾಡಿಸಿದ್ದಾರೆ. ಸಾಗರ ಎಂಬ ಯುವಕನಿಗೆ ಎರಡೂ ಕಾಲು, ಒಂದು ಕೈ ಕಳೆದುಕೊಂಡು ಜೀವಂತ ಶವವಾಗಿದ್ದಾನೆ. ಆ ಪ್ರಕರಣಗಳನ್ನೂ ರಾಜಿ ಪಂಚಾಯಿತಿ ಮಾಡಿಸುತ್ತಿದ್ದಾರೆ. ಪೊಲೀಸರು ರಾಜಿ ಮಾಡಿಸಲು ತೋರುವಷ್ಟು ಮುತುವರ್ಜಿಯನ್ನು ಆರೋಪಿಗಳಿಗೆ ಶಿಕ್ಷೆ ಕೊಡಿಸಲು ತೋರುತ್ತಿಲ್ಲ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂತ್ರಸ್ತರಾದ ಮುನಿರಾಜು, ನಾಗರತ್ನ, ಗಿರೀಶ್ ಇದ್ದರು.

ದಲಿತರ ಮೇಲಿನ ದೌರ್ಜನ್ಯ ತಡೆಯಲೆಂದೇ ಡಿಸಿಆರ್‌ಇ ಸ್ಥಾಪನೆಯಾಗಿದೆ. ಆದರೆ, ಇದುವರೆಗೂ ಒಬ್ಬನೇ ಒಬ್ಬ ಆರೋಪಿಗೆ ಶಿಕ್ಷೆ ಕೊಡಿಸಿದ ಉದಾಹರಣೆ ಇಲ್ಲವಾಗಿದೆ. ಇದರಿಂದ ದಲಿತರ ಮೇಲಿನ ದೌರ್ಜನ್ಯ ತಡೆ ಕಾಯ್ದೆ ದುರ್ಬಲವಾಗುವ ಜತೆಗೆ ಡಿಸಿಆರ್‌ಇ ಸ್ಥಾಪನೆಯ ಸರ್ಕಾರದ ಆಶಯವೇ ವಿಫಲವಾಗಿದೆ.

ಮಲ್ಲಿಕಾರ್ಜುನ್, ಧಮ್ಮ ದೀವಿಗೆ ಟ್ರಸ್ಟ್‌ನ ಅಧ್ಯಕ್ಷರು.

ಮುಖ್ಯಮಂತ್ರಿ ಪದಕ ಪುರಸ್ಕೃತ ಪೊಲೀಸ್ ರುದ್ರೇಶ್ ಅವರಿಗೆ ಜನಸ್ನೇಹಿ ಪೊಲೀಸ್ ಬಿರುದು ನೀಡಿ ಗೌರವ

ರಾಮನಗರ : ಸದಾ ಜನರ ಪರವಾಗಿ ಕೆಲಸ ಮಾಡುವ ಇಲಾಖೆ ಪೊಲೀಸ್ ಇಲಾಖೆ ಸಮಾಜದ ಜೊತೆ ಬೆಳೆದು ನಾನು ಸಮಾಜದ ಭಾಗ ಎಂದು ತಿಳಿದುಕೊಂಡು ಕೆಲಸ ಮಾಡಿದರೆ ಪೊಲೀಸ್ ಜನಸ್ನೇಹಿಯಾಗಬಹುದು ಎಂದು ನಿವೃತ್ತ ಐಪಿಎಸ್ ಅಧಿಕಾರಿ ವಿಶ್ವ ವೀರಶೈವ ಲಿಂಗಾಯಿತ ಒಕ್ಕೂಟ ರಾಜ್ಯಾಧ್ಯಕ್ಷ ಜ್ಯೋತಿ ಪ್ರಕಾಶ್ ಮಿರ್ಜಿ ತಿಳಿಸಿದರು.

ರಾಮನಗರದ ಖಾಸಗಿ ಕಲ್ಯಾಣ ಮಂಟಪದಲ್ಲಿ ಕನ್ನಡಪರ, ದಲಿತಪರ, ರೈತಪರ ಪ್ರಗತಿಪರ ಸಂಘಟನೆಗಳು ಹಿಂದುಳಿದ ವರ್ಗಗಳ ಒಕ್ಕೂಟ, ಪ್ರಾಚೀನ ಬುಡಕಟ್ಟು ಆದಿವಾಸಿ ವೇದಿಕೆ ವತಿಯಿಂದ ಮುಖ್ಯಮಂತ್ರಿ ಪದಕ ಪುರಸ್ಕೃತ ಪೊಲೀಸ್ ರುದ್ರೇಶ್ ಅವರಿಗೆ ಜನಸ್ನೇಹಿ ಪೊಲೀಸ್ ಬಿರುದು ನೀಡಿ ಗೌರವಿಸಿದ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪೊಲೀಸ್ ರುದ್ರೇಶ್ ಅವರು ಸಮಾಜದೊಟ್ಟಿಗೆ ಬೆಳೆದು ಎಲ್ಲರಲ್ಲಿ ನಾನು ಎಂಬಂತೆ ತಮ್ಮ ಕರ್ತವ್ಯ ನಿಷ್ಠೆ ತೋರಿದ್ದಾರೆ. ಅವರ ಕೆಲಸ ಅವರ ಕರ್ತವ್ಯ ನಿಷ್ಠೆ ಪ್ರಾಮಾಣಿಕತೆ ಗುರ್ತಿಸಿ ಜಿಲ್ಲೆಯ ಸಂಘ ಸಂಸ್ಥೆಗಳು ಅವರಿಗೆ ಜನಸ್ನೇಹಿ ಬಿರುದು ನೀಡಿ ರುದ್ರೇಶ್ ಚಿನ್ನದ ಹುಡುಗ ಎಂದು ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿ ಇದು ಅವರಿಗೆ ದೊರೆತ ಮುಖ್ಯಮಂತ್ರಿಗಳ ಚಿನ್ನದ ಪದಕಗಿಂತ ದೊಡ್ಡದು. ನಮ್ಮಲ್ಲಿನ ಒಳ್ಳೆ ನಡತೆ ನಾವು ಮಾಡುವ ಒಳ್ಳೆ ಕೆಲಸ ನಮ್ಮನ್ನು ಗುರ್ತಿಸುತ್ತವೆ ಎಂಬುದಕ್ಕೆ ಸಾಕ್ಷಿ ಪೊಲೀಸ್ ರುದ್ರೇಶ್ ಎಂದರು.

ಅಂತಹ ಗೌರವ ಎಲ್ಲರಿಗೂ ಸಿಗುವುದಿಲ್ಲ ಯಾರು ಸಮಾಜದ ಪರವಾಗಿ ಜನರ ಪರವಾಗಿ ಕೆಲಸ ಮಾಡುತ್ತಾರೋ ಅವರಿಗೆ ಇಂತಹ ಸನ್ಮಾನ ಬಿರುದುಗಳು ಹುಡುಕಿಕೊಂಡು ಬರುತ್ತವೆ. ಅದಕ್ಕೆ



ಸಾಕ್ಷಿ ಎಂಬಂತೆ ಅವರು ಈ ಹಿಂದೆ ಮುಖ್ಯಮಂತ್ರಿ ಪದಕ ಪಡೆದಿರುವುದೇ ಉದಾಹರಣೆಯಾಗಿದೆ. ಸಂಘ ಸಂಸ್ಥೆಗಳಿಂದ ಬಿರುದು ರುದ್ರೇಶ್ ಅವರಿಗೆ ಸಿಕ್ಕಿರುವುದು ಅತ್ಯಂತ ಸಂತಷ ತಂದಿದೆ. ಅವರು ತಮ್ಮ ಸೇವಾ ಅವಧಿಯಲ್ಲಿ ಸಮಾಜಕ್ಕೆ ಮತ್ತಷ್ಟು ಸೇವೆ ನೀಡಲಿ ಎಂದು ಶುಭ ಹಾರೈಸಿ ತಿಳಿಸಿದರು.

ಕರ್ನಾಟಕ ನವನಿರ್ಮಾಣ ಸೇನೆ ರಾಜ್ಯಾಧ್ಯಕ್ಷ ಭೀಮಾಶಂಕರ್ ಪಾಟೀಲ್ ಮಾತನಾಡಿ ಕಳೆದ 25 ವರ್ಷಗಳಿಂದ ರಾಮನಗರ ಜಿಲ್ಲೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಪೊಲೀಸ್ ರುದ್ರೇಶ್ ಅವರು ಮಿತ ಭಾಷಿಯಾಗಿ ತಮ್ಮ ಕರ್ತವ್ಯದ ಮೂಲಕವೇ ಜನರಿಗೆ ಹತ್ತಿರವಾಗಿದ್ದಾರೆ. ಒಂದು ಸಾಮಾನ್ಯ ಕುಟುಂಬದಲ್ಲಿ ಹುಟ್ಟಿ ಬಂದ ಇವರು ತಮ್ಮ ಹುದ್ದೆಗೆ ಎಂದೂ ಅಹಂ ತೋರಿದವರಲ್ಲ. ಅವರಲ್ಲಿನ ಜನ ಸೇವೆ ಕಂಡು ಜಿಲ್ಲೆಯ ಕನ್ನಡಪರ, ರೈತಪರ, ದಲಿತಪರ ಸಂಘಟನೆಗಳು ಜನಸ್ನೇಹಿ ಬಿರುದು ನೀಡಿ ಗೌರವಿಸುತ್ತಿದೆ. ಇಂತಹ ಸಂಧರ್ಭದಲ್ಲಿ ಅವರ ಸೇವೆ ಮತ್ತಷ್ಟು ಜನರಿಗೆ ಸಿಗಲಿ ಮುಂದಿನ ದಿನಗಳಲ್ಲಿ ಉನ್ನತ ಸ್ಥಾನಮಾನ ಅವರ ಇಲಾಖೆಯಲ್ಲಿ ಸಿಗುವಂತಾಗಲಿ ಎಂದರು.

ಜೆಡಿಎಸ್ ತಾಲ್ಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ ಮಾತನಾಡಿ ಸೇವೆಯಲ್ಲಿ ಯಾರು ಉತ್ತಮ ಕಾರ್ಯ ಮಾಡುತ್ತಾರೋ ಅವರನ್ನು ಜನ ಗುರ್ತಿಸುತ್ತಾರೆ ಎಂಬುದಕ್ಕೆ ಈ ದಿನ ನಡೆಯುತ್ತಿರುವ ಕಾರ್ಯಕ್ರಮವೇ ಸಾಕ್ಷಿಯಾಗಿದೆ. ಒಬ್ಬ ಪೊಲೀಸ್ ಅಧಿಕಾರಿಗೆ ಈ ರೀತಿಯಲ್ಲಿ ಸಮಾಜದಿಂದ ಸಂಘ ಸಂಸ್ಥೆಗಳಿಂದ ಬಿರುದು ಗೌರವ ಸಿಗುತ್ತಿದೆ ಎಂದರೆ ಅವರ ಉತ್ತಮ ಸಾಮಾಜಿಕ ಸೇವಾ ಕಾರ್ಯಗಳೇ ಸಾಕ್ಷಿಯಾಗಿ ನಿಲ್ಲುತ್ತವೆ. ಜನರಿಗೆ ಹತ್ತಿರವಾಗಿ ತಮ್ಮ ಸೇವೆ ನೀಡಿದವರಿಗೆ ಇಂತಹ ಪ್ರಶಂಸೆ ಹೊಗಳಿಕೆ ಸಿಗುತ್ತದೆ ಎಂಬುದಕ್ಕೆ ಪೊಲೀಸ್ ರುದ್ರೇಶ್ ಅವರಿಗೆ ನೀಡುತ್ತಿರುವ ಜನಸ್ನೇಹಿ ಬಿರುದೇ ಆ ಮಾತನ್ನು ಹೇಳುತ್ತದೆ ಎಂದರು.

ಬಿಡದಿ ಕೂಟಗಲ್ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಅರೇಹಳ್ಳಿ ಗಂಗಾಧರ್‌ಗೌಡ ಮಾತನಾಡಿ ಪೊಲೀಸ್ ರುದ್ರೇಶ್ ಅವರು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುವಾಗ ಯಾವ ಯಾವುದೇ ಜಾತಿ ಪರವಾಗಿ, ರಾಜಕೀಯ ಪಕ್ಷಗಳ ಪರವಾಗಿ ಆಸೆ ಆಮಿಷಕ್ಕೆ ಒಳಗಾಗಿ ಕೆಲಸ ಮಾಡಿದವರಲ್ಲ ನ್ಯಾಯದ ಪರವಾಗಿ ಕೆಲಸ ಮಾಡಿದವರು. ಜೊತೆಗೆ ಅಸಬ್ಯ ಪದ ಬಳಕೆ ಎಂದೂ ಕೂಡ ಬಂದಿಲ್ಲ ಇಂತಹ ಸಂಧರ್ಭದಲ್ಲಿ ಅವರ ನಿಸ್ವಾರ್ಥ ಸೇವೆ ಗುರ್ತಿಸಿ ಸಂಘಟನೆಗಳು ಜನಸ್ನೇಹಿ ಪೊಲೀಸ್ ಬಿರುದು ನೀಡಿ ಗೌರವಿಸುತ್ತಿರುವುದು ಅವರ ಸೇವಾ ನಿಷ್ಠೆ ಸಮಾಜದಲ್ಲಿ ಹೇಗಿದೆ ಎಂಬುದನ್ನು ತೋರುತ್ತಿದೆ ಎಂದರು.

ಯರೇಹಳ್ಳಿ ವನಸಿರಿ ಆಶ್ರಮದ ಶ್ರೀ ಶಂಕರ್ ಆರಾಧ್ಯ ಗುರೂಜಿ ಆಶೀರ್ವಚನ ನೀಡಿದರು. ಕಸ್ತೂರಿ ಕರ್ನಾಟಕ ಜನಪರ ವೇದಿಕೆ ರಾಜ್ಯಾಧ್ಯಕ್ಷ ರಮೇಶ್ ಗೌಡ, ಕರುನಾಡ ಸೇನೆ ರಾಜ್ಯ ಉಪಾಧ್ಯಕ್ಷ ಐಜೂರು ಎಂ. ಜಗದೀಶ್, ರೈತ ಸಂಘದ ಮುಖಂಡರಾದ ಚನ್ನಪಟ್ಟಣ ಪುಟ್ಟಸ್ವಾಮಿ, ರೈತ ಸಂಘದ ರಾಜ್ಯ ಉಪಾಧ್ಯಕ್ಷ ಮಲ್ಲಯ್ಯ, ಜಿಲ್ಲಾ ಬಿಜೆಪಿ ಮಾಜಿ ಅಧ್ಯಕ್ಷ ಕನಕಪುರ ನಾಗರಾಜು ಮಾತನಾಡಿದರು.

ನನಗೆ ನೀಡಿದ ಈ ಬಿರುದು ಸನ್ಮಾನ ನನ್ನ ಹಡೆದ ತಂದೆ ತಾಯಿಗಳಿಗೆ ನಾಡಿನ ಜನರಿಗೆ ನಾನು ಸೇವೆ ಸಲ್ಲಿಸುತ್ತಿರುವ ಪೊಲೀಸ್ ಇಲಾಖೆಗೆ ಜಿಲ್ಲೆಯ ಜನತೆಗೆ ಸಮರ್ಪಿಸುತ್ತೇನೆ. ನಾನು ಎಂದೂ ಜನರಿಂದ ದೂರವಾಗಿ ಹೋದವನಲ್ಲ ಜನರಿಗೆ ಹತ್ತಿರವಾಗಿ ನನ್ನ ಕೈಲಾದ ಸೇವೆ ಮಾಡಬೇಕೆಂಬ ಕನಸು ಹೊತ್ತು ಬಂದವನು ಅದರಂತೆ ಪೊಲೀಸ್ ಇಲಾಖೆಯಲ್ಲಿ ಶಿಸ್ತು, ಸಂಯಮದಲ್ಲಿ ಸೇವೆ ಸಲ್ಲಿಸಿದ್ದೇನೆ. ನನ್ನ ಸೇವೆ ಗುರ್ತಿಸಿ ಕನ್ನಡಪರ, ದಲಿತಪರ, ರೈತಪರ ಮತ್ತಿತರ ಹತ್ತಾರು ಸಂಘಟನೆಗಳು ಜನಸ್ನೇಹಿ ಬಿರುದು ನೀಡಿ ಗೌರವಿಸುತ್ತಿರುವುದು ಖುಷಿ ತಂದಿದೆ. ಮತ್ತಷ್ಟು ಸೇವೆ ಸಲ್ಲಿಸಲು ಪ್ರೇರಣೆಯಾಗಿದೆ.

ಪೊಲೀಸ್ ರುದ್ರೇಶ್, ಜನಸ್ನೇಹಿ ಬಿರುದು ಪ್ರಶಸ್ತಿಗೆ ಭಾಜನರಾದವರು.

ಕರವೇ ಪ್ರವೀಣ್ ಶೆಟ್ಟಿ ಬಣದ ಜಿಲ್ಲಾ ಘಟಕದ ಅಧ್ಯಕ್ಷ ರಾಜು ಎಂ.ಎನ್.ಆರ್, ಸ್ವಾಭಿಮಾನಿ ಬಣದ ರಾಜ್ಯ ಉಸ್ತುವಾರಿ ಶಿವುಗೌಡ, ಜಿಲ್ಲಾಧ್ಯಕ್ಷ ಕಿರಣ್, ಕರುನಾಡ ಸೇನೆ ಗಂಗಾಧರ್ ವಿ.ಎನ್. ಸಂಘಟನೆಗಳ ಮುಖಂಡರುಗಳಾದ ಕೆಂಗಲ್ಲಯ್ಯ, ಪುನೀತ್, ಕುಮಾರ್, ರಾಜಶೇಖರ್, ದಿವ್ಯಾ ಆಲೂರು ಕೃಷ್ಣಮೂರ್ತಿ ಇರುಳಿಗ, ಬೆಟ್ಟೇಗೌಡ, ವಿನೋದ್‌ರಾಜ್, ನಾರಾಯಣಗೌಡ, ಸ್ವಾಮಿ, ಅಂಜನಾಪುರ ವಾಸು, ಕೂನಮುದ್ದನಹಳ್ಳಿ ರುದ್ರೇಶ್, ಶಿವಲಿಂಗಪ್ರಸಾದ್, ಗುನ್ನೂರು ಗಿರೀಶ್, ಕೈಲಾಂಚ ಗಿರೀಶ್, ಅರ್ಜುನ್ ಚಕ್ರವರ್ತಿ, ದೇವರದೊಡ್ಡಿ ರಾಮಣ್ಣ, ಕಗ್ಗಲಹಳ್ಳಿ ಶಾಂತಮ್ಮ, ಬಿಡದಿ ವಿಜಯಕುಮಾರ್ ಇದ್ದರು.

ಎಚ್‌ಎಸ್‌ಆರ್ ಬಡಾವಣೆಯಲ್ಲಿ ನ. 1ರಂದು 'ಮುದ್ದೆ ಮಹಾಯುದ್ಧ 2026'

ಸೂರ್ಯಪ್ರಗತಿನ್ಯೂಸ್.ಕಾಂ



ಕೊಳ್ಳೇಗಾಲ ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಣೆ ಕಾರ್ಯಕ್ರಮವನ್ನು ಆಚರಿಸಲಾಯಿತು, ಶಾಸಕರಾದ ಎ. ಆರ್. ಕೃಷ್ಣಮೂರ್ತಿಯವರು ಕಾರ್ಯಕ್ರಮವನ್ನು ಉದ್ಘಾಟಿಸಿದರು

ನಂತರ ಮಾತನಾಡಿ, ವಾಲ್ಮೀಕಿ ರಾಮಾಯಣದಲ್ಲಿ ಬರುವಂತ ನೀತಿ ಪಾಠಗಳನ್ನ ಆದರ್ಶಗಳನ್ನ ರೂಡಿಸಿಕೊಳ್ಳಬೇಕು, ಪ್ರತಿಯೊಬ್ಬರು ತಮ್ಮ ಜೀವನವನ್ನ ಹೇಗೆ ಬದಲಾಯಿಸಿಕೊಳ್ಳಬೇಕು ಎಂಬುದಕ್ಕೆ ವಾಲ್ಮೀಕಿಯವರ ಜೀವನ ಚರಿತ್ರೆ ಸಾಕ್ಷಿಯಾಗಿದೆ, ಜ್ಞಾನ ಮತ್ತು ಪರಿಶ್ರಮದಿಂದ ತಮ್ಮ ಜೀವನವನ್ನೇ ಬದಲಾಯಿಸಿಕೊಂಡ ವಾಲ್ಮೀಕಿ ತ್ಯಾಗ ಶ್ರೇಷ್ಠವಾದದ್ದು, ಯಾವ ರೀತಿ ಬೇಡನಾಗಿದ್ದ ವಾಲ್ಮೀಕಿ ಪರಿವರ್ತನೆಯಾಗಿ, ಕಠಿಣ ತಪಸ್ಸನ್ನು ಮಾಡಿ ರಾಮಾಯಣದಂತ ಕೃತಿಯನ್ನು ರಚಿಸಿ ದಯೆ ಕರುಣೆ, ತ್ಯಾಗ, ಪಿತೃ ವಾಕ್ಯ ಪರಿಪಾಲನೆಯ ಆದರ್ಶ ಗುಣಗಳನ್ನು ಸಮಾಜಕ್ಕೆ ತಿಳಿಸಿಕೊಟ್ಟಿದ್ದಾರೆ ಮಹನೀಯರ ಜಯಂತಿಯನ್ನು ಆಚರಿಸುವ ಮೂಲಕ ಅವರ ಆದರ್ಶ ಗುಣಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಂಡು ಉತ್ತಮ ಜೀವನವನ್ನು ರೂಪಿಸಿಕೊಳ್ಳಬೇಕು,ಹಾಗೆಯೇ ಬುಡಕಟ್ಟು ಸಮುದಾಯದ ವಿಶ್ವ ವಿದ್ಯಾಲಯ ನಿರ್ಮಾಣಕ್ಕೆ ಸರ್ಕಾರಕ್ಕೆ ಬೇಡಿಕೆಯನ್ನು ನೀಡಲಾಗಿದೆ, ಆದ್ದರಿಂದ ಸರ್ಕಾರ ಈ ವರ್ಷವೇ ರಾಜ್ಯದಲ್ಲಿ ಬುಡಕಟ್ಟು ಸಮುದಾಯಗಳ ಮಕ್ಕಳ ವಿದ್ಯಾಭ್ಯಾಸದ ದೃಷ್ಟಿಯಿಂದ ಒಂದು ವಿಶ್ವವಿದ್ಯಾಲಯವನ್ನು ನಿರ್ಮಾಣ ಮಾಡಲು ಸದನದಲ್ಲಿ ಪ್ರಸ್ತಾಪಿಸಲಾಗಿದೆ, ಸಿದ್ದರಾಮಯ್ಯ ನವರು ಮುಖ್ಯಮಂತ್ರಿಗಳಾಗಿದ್ದ ಸಂದರ್ಭದಲ್ಲಿ ಬುಡಕಟ್ಟು ಜನಾಂಗದ ಮಕ್ಕಳ ಶಿಕ್ಷಣಕ್ಕೆ ಹೆಚ್ಚು ಆದ್ಯತೆಯನ್ನು ಕೊಟ್ಟು ಹಲವಾರು ಬುಡಕಟ್ಟಿ ಮಕ್ಕಳ ಆಶ್ರಮ ಶಾಲೆಗಳು ವಸತಿ ಶಾಲೆಗಳನ್ನು ನಿರ್ಮಾಣ ಮಾಡಿಕೊಟ್ಟಿದೆ, ಆದ್ದರಿಂದ ಸಮುದಾಯದ ಮುಖಂಡರ ವತಿಯಿಂದ ಕೊಟ್ಟಿರುವ ಮನವಿಯನ್ನು ಸರ್ಕಾರದ ಮಟ್ಟಕ್ಕೆ ತಲುಪಿಸಿ ಬುಡಕಟ್ಟು ಮಕ್ಕಳ ಶಿಕ್ಷಣಕ್ಕಾಗಿ ಬುಡಕಟ್ಟು ಜನಾಂಗದ ವಿಶ್ವ ವಿದ್ಯಾಲಯವನ್ನು ನಿರ್ಮಾಣ ಮಾಡಿಸಲು ತೀರ್ಮಾನವನ್ನು ಕೈಗೊಳ್ಳುವಂತೆ ಒತ್ತಡ ಹೇರಲಾಗುವುದು,

ಡಾ ಬಿ. ಆರ್ ಅಂಬೇಡ್ಕರ್ ರವರು ಸಂವಿಧಾನದಲ್ಲಿ ನೀಡಿರುವ ಮೀಸಲಾತಿಯಿಂದ ದೇಶದ ಎಲ್ಲ ವರ್ಗದ ಎಲ್ಲ ಧರ್ಮದ ಎಲ್ಲ ಸಮುದಾಯದವರಿಗೂ ಕೂಡ ಮೀಸಲಾತಿಯಲ್ಲಿ ಶಿಕ್ಷಣ, ಸಾಮಾಜಿಕ ಆರ್ಥಿಕ, ರಾಜಕೀಯ ಸ್ಥಾನಮಾನಗಳನ್ನು ಪಡೆಯುವ ಅವಕಾಶಗಳನ್ನು ಕೊಡಲಾಗಿದೆ ಆದ್ದರಿಂದ ಎಲ್ಲ ಸಮುದಾಯದ ಮಕ್ಕಳು ಕೂಡ ಉತ್ತಮ ಶಿಕ್ಷಣವನ್ನು ಪಡೆದು ಉತ್ತಮ ಪ್ರಜೆಗಳಾಗಿ ಹೊರ ಒಮ್ಮಬೇಕು ಎಂದು ತಿಳಿಸಿದರು.

ಎನ್‌ಡಿಎ ಗೆಲುವಿಗೆ ಮೈತ್ರಿ ಪಕ್ಷದ ಕಾರ್ಯಕರ್ತರ ಸಂಭ್ರಮ

ಜೆಡಿಎಸ್ ಬಿಜೆಪಿ ಕಾರ್ಯಕರ್ತರಿಂದ ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ

ಸೂರ್ಯಪ್ರಗತಿನ್ಯೂಸ್.ಕಾಂ



ರಾಮನಗರ: ವಿಧಾನ ಪರಿಷತ್ತಿನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯಲ್ಲಿ ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಎ.ಪಿ. ರಂಗನಾಥ್ ಗೆಲುವು ಸಾಧಿಸಿದ ಹಿನ್ನೆಲೆಯಲ್ಲಿ ರಾಮನಗರದ ಐಜೂರು ವೃತ್ತದಲ್ಲಿ ಜೆಡಿಎಸ್ ಬಿಜೆಪಿ ಕಾರ್ಯಕರ್ತರು ಪಟಾಕಿ ಸಿಡಿಸಿ, ಸಿಹಿ ವಿತರಿಸಿ ವಿಜಯೋತ್ಸವ ಆಚರಿಸಿದರು.

ಮಂಗಳವಾರ ನಡೆದ ಮತ ಎಣಿಕೆಯಲ್ಲಿ ಎ.ಪಿ. ರಂಗನಾಥ್ ಅವರು 10,810 ಮೊದಲ ಪ್ರಾಶಸ್ತ್ಯದ ಮತಗಳನ್ನು ಪಡೆದರೆ, ಪುಟ್ಟಣ್ಣ ಅವರು 9,902 ಮತಗಳನ್ನು ಗಳಿಸಿದರು. ಈ ಮೂಲಕ ರಂಗನಾಥ್ ಅವರು 908 ಮತಗಳ ಅಂತರದ ಮುನ್ನಡೆ ಸಾಧಿಸಿದರು.

ಗೆಲುವಿನ ಸುದ್ದಿ ತಿಳಿಯುತ್ತಿದ್ದಂತೆ ಐಜೂರು ವೃತ್ತದಲ್ಲಿ ಜಮಾಯಿಸಿದ ಜೆಡಿಎಸ್ ಬಿಜೆಪಿ ಕಾರ್ಯಕರ್ತರು ಸಂಭ್ರಮಾಚರಣೆ ನಡೆಸಿದರು.

ಕಾರ್ಯಕರ್ತರ ವಿಜಯೋತ್ಸವ: ಪಟಾಕಿ ಸಿಡಿಸಿ, ಪರಸ್ಪರ ಸಿಹಿ ಹಂಚಿ, ಘೋಷಣೆಗಳನ್ನು ಕೂಗುವ ಮೂಲಕ ಸಂತಸ ವ್ಯಕ್ತಪಡಿಸಿದರು. ಮುಂದಿನ ವಿಧಾನಸಭೆ ಚುನಾವಣೆಗೆ ಈ ಗೆಲುವು ದಿಕ್ಸೂಚಿ ಎಂದು ಘೋಷಣೆಗಳನ್ನು ಕೂಗಿ ಸಂಭ್ರಮಿಸಿದರು.ಈ ಸಂದರ್ಭದಲ್ಲಿ ಮಾತನಾಡಿದ ಜೆಡಿಎಸ್ ತಾಲೂಕು ಅಧ್ಯಕ್ಷ ಸಬ್ಬಕೆರೆ ಶಿವಲಿಂಗಪ್ಪ, ಬೆಂಗಳೂರು ಶಿಕ್ಷಕರ ಕ್ಷೇತ್ರದ ಈ ಗೆಲುವು 2028ರ ಚುನಾವಣೆಗೆ ದಿಕ್ಸೂಚಿಯಾಗಿದೆ. ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿಗೆ ಪ್ರಬುದ್ಧ ಶಿಕ್ಷಕ ಮತದಾರರು ಆಶೀರ್ವಾದ ಮಾಡಿದ್ದಾರೆ. ರಾಜ್ಯದಲ್ಲಿ ಆಡಳಿತ ವಿರೋಧಿ ಅಲೆ ಇರುವುದಕ್ಕೆ ಈ ಫಲಿತಾಂಶ ಸ್ಪಷ್ಟ ನಿದರ್ಶನವಾಗಿದೆ ಎಂದು ಹೇಳಿದರು.

ಜೆಡಿಎಸ್ ಮತ್ತು ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಒಗ್ಗಟ್ಟಿನಿಂದ ಶ್ರಮಿಸಿದ್ದರಿಂದ ಮೈತ್ರಿ ಅಭ್ಯರ್ಥಿಯ ಗೆಲುವಿಗೆ ಸಹಕಾರಿಯಾಗಿದೆ ಎಂದು ಅವರು ತಿಳಿಸಿದರು.

ಮುಖಂಡರು, ಕಾರ್ಯಕರ್ತರು ಭಾಗಿ: ವಿಜಯೋತ್ಸವದಲ್ಲಿ ಎನ್‌ಡಿಎ ಮುಖಂಡರಾದ ಆರ್.ವಿ.ಸುರೇಶ್, ನಗರಸಭೆ ಸದಸ್ಯ ಮಂಜುನಾಥ್, ಅಂಜನಾಪುರ ವಾಸು, ಮಾಜಿ ಸದಸ್ಯ ಬಾಲಗೇರಿ ರವಿ, ರಾಮಕೃಷ್ಣಯ್ಯ, ಬಸವನಪುರ ಪ್ರಕಾಶ್, ಚಂದ್ರಯ್ಯ, ಬೋರೇಗೌಡ, ಸಂಜಯ್, ರುದ್ರದೇವರು, ಭಾಸ್ಕರ್, ಗೌರಮ್ಮ, ಪೂರ್ಣಿಮಾ, ಜಯಮ್ಮ, ಕೊತ್ತೀಪುರ ಗೋವಿಂದರಾಜು, ಆಡಿಟರ್ ಕುಮಾರ್, ಜಿ. ಟಿ. ಕೃಷ್ಣೇಗೌಡ, ಜಯಕುಮಾರ್, ಪ್ರಕಾಶ್, ಸಂಜಯ್ ಜೈನ್, ಪ್ರಶಾಂತ್, ಸಂತೋಷ್, ಸಿದ್ದಲಿಂಗಮೂರ್ತಿ, ರವಿ, ವರುಣ್, ಪಾದರಹಳ್ಳಿ ಚಂದ್ರಶೇಖರ್, ಪ್ರವೀಣ್ ಸೇರಿದಂತೆ ಹಲವು ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು.

ವಿಧಾನಪರಿಷತ್ ಚುನಾವಣೆ: ಸತತ 5 ಬಾರಿ ಗೆದ್ದಿದ್ದ ಕಾಂಗ್ರೆಸ್‌ನ ಪುಟ್ಟಣ್ಣಗೆ ಸೋಲು; ಎನ್‌ಡಿಎ ಅಭ್ಯರ್ಥಿ ರಂಗನಾಥ್‌ಗೆ ಜಯ

ಸೂರ್ಯಪ್ರಗತಿನ್ಯೂಸ್.ಕಾಂ

ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನಪರಿಷತ್ ಚುನಾವಣೆಯಲ್ಲಿ ಸತತ 5 ಬಾರಿ ಗೆದ್ದಿದ್ದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಅವರಿಗೆ ಸೋಲಾಗಿದ್ದು, ಎನ್‌ಡಿಎ ಮೈತ್ರಿಕೂಟದ ಅಭ್ಯರ್ಥಿ ಎ.ಪಿ. ರಂಗನಾಥ್ 908 ಮತಗಳ ಅಂತರದಿಂದ ಜಯಗಳಿಸಿದ್ದಾರೆ. ಪ್ರಚಂಡ ಗೆಲುವು ದಾಖಲಿಸಿದ ಓಆಂ ಮೈತ್ರಿಕೂಟದ ಅಭ್ಯರ್ಥಿ ವಿಜಯಕ್ಕೆ ಬಿಜೆಪಿ–ಜೆಡಿಎಸ್ ಸಂತಸ ವ್ಯಕ್ತಪಡಿಸಿದೆ.

ಭಾರಿ ಕುತೂಹಲಕ್ಕೆ ಕಾರಣವಾಗಿದ್ದ ವಿಧಾನಪರಿಷತ್‌ನ ಬೆಂಗಳೂರು ಶಿಕ್ಷಕರ ಕ್ಷೇತ್ರದ ಚುನಾವಣೆಯ ಫಲಿತಾಂಶ ಹೊರಬಿದ್ದಿದೆ. ಸತತ 5 ಬಾರಿ ಗೆದ್ದಿದ್ದ ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಸೋಲುಂಡಿದ್ದು, ಎನ್‌ಡಿಎ ಅಭ್ಯರ್ಥಿ ಎ.ಪಿ.ರಂಗನಾಥ್ ಗೆಲುವಿನ ನಗೆ ಬೀರಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಒಟ್ಟು 27,405 ಮತದಾರರಿದ್ದು, 22,468 ಮತಗಳು ಚಲಾವಣೆಯಾಗಿದ್ದವು. ಈ ಪೈಕಿ ನ್ ಡಿಎ ಅಭ್ಯರ್ಥಿ ಎ.ಪಿ. ರಂಗನಾಥ್ 10,810 ವೋಟ್ ಪಡೆದಿದ್ದರೆ, ಕಾಂಗ್ರೆಸ್ ಅಭ್ಯರ್ಥಿ ಪುಟ್ಟಣ್ಣ ಪರ 9,902 ಮತಗಳು ಬಂದಿವೆ. ಅಂತಿಮವಾಗಿ 908 ಮತಗಳ ಅಂತರದಲ್ಲಿ ಎನ್‌ಡಿಎ ಅಭ್ಯರ್ಥಿ ಗೆದ್ದು ಬೀಗಿದ್ದಾರೆ. ಚಲಾವಣೆಯಾಗಿದ್ದ ಒಟ್ಟು ಮತಗಳ ಪೈಕಿ 20,611 ಸಿಂಧುವಾಗಿದ್ದರೆ, 1,857 ಅಸಿಂಧುವಾಗಿವೆ.



ಬಿಜೆಪಿ –ಜೆಡಿಎಸ್ ಸಂತಸ 2026ರ ಕರ್ನಾಟಕ ವಿಧಾನಪರಿಷತ್ ಚುನಾವಣೆಯ ಬೆಂಗಳೂರು ಶಿಕ್ಷಕರ ಕ್ಷೇತ್ರದಲ್ಲಿ ಪ್ರಚಂಡ ಗೆಲುವು ದಾಖಲಿಸಿದ ಎನ್.ಡಿ.ಎ (ಬಿಜೆಪಿ ಜೆಡಿಎಸ್) ಮೈತ್ರಿಕೂಟದ ಅಭ್ಯರ್ಥಿ ಎ.ಪಿ.ರಂಗನಾಥ್ ಅವರಿಗೆ ಜೆಡಿಎಸ್ ಅಭಿನಂದನೆ ತಿಳಿಸಿದೆ. ರಂಗನಾಥ್ ಅವರ ಮೇಲೆ ವಿಶ್ವಾಸವಿಟ್ಟು, ಶಿಕ್ಷಕರ ಹಿತರಕ್ಷಣೆ ಮತ್ತು ಶಿಕ್ಷಣ ಕ್ಷೇತ್ರದ ಏಳಿಗೆಗಾಗಿ ಮತ ನೀಡಿ ಬೆಂಬಲಿಸಿದ ಬೆಂಗಳೂರು ಶಿಕ್ಷಕರ ಕ್ಷೇತ್ರದ ಸಮಸ್ತ ಶಿಕ್ಷಕ ಹಾಗೂ ಅಧ್ಯಾಪಕ ಬಂಧುಗಳಿಗೆ ಅನಂತ ಧನ್ಯವಾದಗಳು. ಹಾಗೆಯೇ, ಈ ಐತಿಹಾಸಿಕ ಗೆಲುವಿಗಾಗಿ ಒಗ್ಗಟ್ಟಿನಿಂದ ಶ್ರಮಿಸಿದ ಬಿಜೆಪಿ ಮತ್ತು ಜೆಡಿಎಸ್ ಪಕ್ಷದ ಎಲ್ಲಾ ನಾಯಕರು, ಮುಖಂಡರು ಹಾಗೂ ಕಾರ್ಯಕರ್ತರಿಗೂ ವಿಶೇಷ ಕೃತಜ್ಞತೆಗಳು ಎಂದು ತಿಳಿಸಿದೆ.

ಶಿಕ್ಷಕರ ಒಗ್ಗಟ್ಟಿಗೆ ಜಯ, ವಿಶ್ವಾಸಕ್ಕೆ ವಿಜಯ, ಸೇವಾ ಸಂಕಲ್ಪಕ್ಕೆ ಹೊಸ ಶಕ್ತಿ ಎಂದು ಬಿಜೆಪಿ ಶಾಸಕ ಸುರೇಶ್ ಕುಮಾರ್ ಕೂಡ ಸಂತಸ ವ್ಯಕ್ತಪಡಿಸಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರದ ವಿಧಾನ ಪರಿಷತ್ ಚುನಾವಣೆಯಲ್ಲಿ 600ಕ್ಕೂ ಅಧಿಕ ಮತಗಳ ಅಂತರದಿಂದ ಅಭೂತಪೂರ್ವ ಗೆಲುವು ಸಾಧಿಸಿರುವ ಬಿಜೆಪಿ ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಯಾದ ಎ.ಪಿ. ರಂಗನಾಥ್ ಅವರಿಗೆ ಹೃತ್ಪೂರ್ವಕ ಅಭಿನಂದನೆಗಳು. ಶಿಕ್ಷಕರ ಧ್ವನಿಯಾಗಿ, ಶಿಕ್ಷಣ ಕ್ಷೇತ್ರದ ಅಭಿವೃದ್ಧಿಯ ಹರಿಕಾರರಾಗಿ, ಶಿಕ್ಷಕ ಸಮುದಾಯದ ಆಶೋತ್ತರಗಳನ್ನು ಈಡೇರಿಸುವಲ್ಲಿ ನಿಮ್ಮ ಕಾರ್ಯ ಯಶಸ್ವಿಯಾಗಲಿ ಎಂದು ಹಾರೈಸುತ್ತೇನೆ ಎಂದವರು ತಿಳಿಸಿದ್ದಾರೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ದೇವೇಗೌಡರ ಕುಟುಂಬ ಮುಗಿಸಲು 600 ಕೋಟಿ ಡೀಲ್ ಕೊಡೋಕೆ ನಮಗೆ ತಿಕ್ಕಲು ಹಿಡಿದಿದೆಯಾ....?
ಕುಮಾರಸ್ವಾಮಿ ವಿರುದ್ಧ ಚಲುವರಾಯಸ್ವಾಮಿ ಗುಡುಗು; ಭೂಮಿಗಾಗಿ ಸಿಎಂಗೆ ಕುಮಾರಸ್ವಾಮಿ ಪತ್ರ ವಿಚಾರ:

ಸೂರ್ಯಪ್ರಗತಿನ್ಯೂಸ್.ಕಾಂ

ಮಂಡ್ಯ:;ದೇವೇಗೌಡರ ಕುಟುಂಬವನ್ನು ಮುಗಿಸುವುದಕ್ಕೆ 600 ಕೋಟಿ ಡೀಲ್ ಕೊಡೋದಕ್ಕೆ ನಮಗೆ ತಿಕ್ಕಲು ಹಿಡಿದಿದೆಯಾ ಎಂದು ಸಚಿವ ಎನ್.ಚಲುವರಾಯಸ್ವಾಮಿ ಅವರು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ಅವರನ್ನು ತರಾಟೆಗೆ ತೆಗೆದುಕೊಂಡಿದ್ದಾರೆ.

ಮಂಡ್ಯದಲ್ಲಿ ಇಂದು ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, ಕುಮಾರಸ್ವಾಮಿ ಇನ್ನೊಬ್ಬರನ್ನು ತೇಜೋವಧೆ ಮಾಡೋದಕ್ಕೆ ಮಾಡಿದ್ದಾರೆ ವಿನಃ ಇನ್ಯಾರು ಮಾಡಲ್ಲ. ಸ್ಟಿಂಗ್ ಆಪರೇಷನ್ ವಿಚಾರದಲ್ಲಿ ಅವರೇ ಇದೆಲ್ಲ ಮಾಡಿಕೊಂಡು ಬಂದಿರುವುದು ಇತಿಹಾಸ.

ದೇವೇಗೌಡರು ಪ್ರಧಾನ ಮಂತ್ರಿ ಸ್ಥಾನದಿಂದ ಕೆಳಗಿಳಿದಾಗ ರೈಲ್ವೆ ಸ್ಟೇಷನ್ ಗೆ ನಮ್ಮನ್ನೆಲ್ಲ ಕರೆದುಕೊಂಡು ಹೋಗಿ ಹೋರಾಟ ಮಾಡಿದ್ದು ಇದೇ ಕುಮಾರಸ್ವಾಮಿ. ಸಿದ್ದರಾಮಯ್ಯ ಅವರನ್ನು ಉಚ್ಚಾಟನೆ ಮಾಡಿದ್ದು ಯಾರು? ಇದೇ ಕುಮಾರಸ್ವಾಮಿ. ಜೆ ಹೆಚ್ ಪಾಟೀಲ್ ಅವರನ್ನು ಡಿಸ್ಟರ್ಬ್ ಮಾಡಿದ್ದು ಯಾರು? ಇದುವರೆಗೂ ಇದೆಲ್ಲ ಮಾಡ್ಕೊಂಡು ಬಂದಿರೋರು ಅವರೇ ಎಂದು ಗುಡುಗಿದರು.



ಹಾಸನದಲ್ಲಿ 350 ಹೆಣ್ಣು ಮಕ್ಕಳಿಗೆ ಅನ್ಯಾಯ ಆಗಿದ್ದು ಬೇಡ, ಪೆನ್ ಡ್ರೈವ್ ಬಿಟ್ಟವರ ಬಗ್ಗೆ ಹೋದ್ರು: ಕುಮಾರಸ್ವಾಮಿಗೆ ಚಲುವರಾಯಸ್ವಾಮಿ ಚಾಟಿ

ಹಾಸನ ಪೆನ್ ಡ್ರೈವ್ ಪ್ರಕರಣದಲ್ಲಿ ಕುಮಾರಸ್ವಾಮಿಗೆ 350 ಹೆಣ್ಣು ಮಕ್ಕಳಿಗೆ ಅನ್ಯಾಯ ಆಗಿದ್ದು ಬೇಕಿಲ್ಲ. ಆದರೆ ಪೆನ್ ಡ್ರೈವ್ ಬಿಡುಗಡೆ ಮಾಡಿದವರ ವಿರುದ್ಧ ಕ್ರಮಕ್ಕೆ ಹೋರಾಟ ಮಾಡ್ತಿದ್ದಾರೆ. ಸಂತ್ರಸ್ತರ ಬಗ್ಗೆ ಅನುಕಂಪ ಇಲ್ಲ, ಪೆನ್ ಡ್ರೈ ಬಿಟ್ಟವರ ಬಗ್ಗೆ ಮಾತನಾಡುತ್ತಾರೆ ಎಂದು ಸಚಿವರು ಕಿಡಿಕಾರಿದರು.

ಈಗ ಸ್ಟಿಂಗ್ ಸಾಬೀತಾಗಿದೆಯಾ? ವಾಯ್ಸ್ ರೆಕಾರ್ಡ್ ಇದೆ ಅಷ್ಟೇ. ತನಿಖೆಯಲ್ಲಿ ಸಾಬೀತಾದರೆ ನೋಡೋಣ. ವಿಡಿಯೋ ಬಿಡುಗಡೆ ಬಗ್ಗೆ 90% ಹುಡುಕಿದ್ದೇವೆ, ಕುಮಾರಸ್ವಾಮಿಗೆ ಯಾಕೆ ಸಿಟ್ಟು? ಇವರ ಮನೆ ಹುಡುಗರು, ಸೋಷಿಯಲ್ ಮೀಡಿಯಾ ಹುಡುಗರು, ದೆಹಲಿ, ನೇಪಾಳಕ್ಕೆ ಹೋಗಿರುವವರು ಯಾರು? ಫೋನ್ ಎಲ್ಲಿ ತಗೊಂಡ್ರು, ಎಲ್ಲಾ ದಾಖಲೆ ಸಿಕ್ಕಿದೆ, ಸಂಬಂಧಪಟ್ಟ ಅಧಿಕಾರಿಗಳು ರಿಲೀಸ್ ಮಾಡ್ತಾರೆ. ಆಮೇಲೆ ಪಾಪ ಅವರು ಪರದಾಡಲಿ ಎಂದು ಸಚಿವರು ಹೇಳಿದರು.

ಸಿಎಂನೇ ಒಪ್ಪಲ್ಲ ಅಂದವರು ಸಿಎಂಗೆ ಪತ್ರ ಬರೆದಿದ್ದಾರೆ, ನನಗೆ ಕನ್ಫ್ಯೂಸ್ ಆಗ್ತಿದೆ: ಕುಮಾರಸ್ವಾಮಿ ಪತ್ರಕ್ಕೆ ಚಲುವರಾಯಸ್ವಾಮಿ ವ್ಯಂಗ್ಯ

ಭೂಮಿಗಾಗಿ ಸಿಎಂಗೆ ಕುಮಾರಸ್ವಾಮಿ ಪತ್ರ ವಿಚಾರ:

ಮಂಡ್ಯದಲ್ಲಿ ಸಚಿವ ಎನ್.ಚಲುವರಾಯಸ್ವಾಮಿ ಹೇಳಿಕೆ – ಏನೋ ಗೊತ್ತಿಲ್ಲ, ಸಿಎಂಗೆ ಪತ್ರ ಬರೆದಿದ್ದಾರೆ, ಬಹಳ ಸಂತೋಷ. ಅವರಿಗೆ ಅಭಿನಂದನೆಗಳು. ಸಿಎಂನ ಒಪ್ಪಲ್ಲ ಅಂದಿದ್ರು, ಡಿಕೆಶಿ ಅನ್ನ ಮುಖ್ಯಮಂತ್ರಿ ಆಗಿ ನಾನು ಒಪ್ಪಲ್ಲ ಅಂದಿದ್ರು, ಅದು ಹೇಗೆ ಪತ್ರ ಬರೆದಿದ್ದಾರೆ ಗೊತ್ತಿಲ್ಲಪ್ಪ. ಸಿಎಂನ ಒಪ್ಪಲ್ಲ ಅಂದವರು ಸಿಎಂಗೆ ಪತ್ರ ಬರೆದಿದ್ದಾರೆ, ನನಗೆ ಕನ್ಫ್ಯೂಸ್ ಆಗ್ತಿದೆ. ಬೇರೆಯವರಿಗೆ ಬರೆಯೋದಕ್ಕೆ ಹೋಗಿ ನಮ್ಮ ಸಿಎಂಗೆ ಬರೆದಿದ್ದಾರಾ ಗೊತ್ತಿಲ್ಲ ಎಂದು ವ್ಯಂಗ್ಯವಾಡಿದರು.

ಕುಮಾರಸ್ವಾಮಿ ರಾಷ್ಟ್ರದ ಖಾತೆ ಇಟ್ಟುಕೊಂಡು ಮಂಡ್ಯ ಬಿಟ್ರೆ ಬೆಂಗಳೂರು, ಬೆಂಗಳೂರು ಬಿಟ್ರೆ ಮಂಡ್ಯ. ಅವರು 100 ಎಕರೆ ಜಾಗ ಕೇಳಿದ್ದರು. ಡಿಸಿ ಹಾಗೂ ನಮಗೆ ಸಿಎಂ ಸೂಚನೆ ಕೊಟ್ಟಿದ್ದರು. ನಾವು 100 ಎಕರೆ ಭೂಮಿಯನ್ನು ಏಆ ಕೊಡುತ್ತೇವೆ. ಕುಮಾರಸ್ವಾಮಿ ಅವರ ಲೆಟರ್ ಗೆ ನಮ್ಮ ಸಿಎಂ ತಕ್ಷಣವೇ ಸ್ಪಂದಿಸಿದ್ದಾರೆ. ಈಗ ಕುಮಾರಸ್ವಾಮಿ ಕೈಗಾರಿಕೆ ತರಲಿ ಎಂದು ಸವಾಲು ಹಾಕಿದರು.

ಕಬ್ಬು ಬೆಳೆಗಾರರ ಸಭೆ ವಿಫಲವಾಗಿಲ್ಲ, ತಮಿಳುನಾಡಿಗೆ

ಡ್ಯಾಂನಿಂದ ನೀರು ಬಿಡುತ್ತಿಲ್ಲ: ಸಚಿವ ಚಲುವರಾಯಸ್ವಾಮಿ ಸ್ಪಷ್ಟನೆ

– ಕಬ್ಬು ಬೆಳೆಗಾರರ ಸಭೆ: ಕಬ್ಬು ಬೆಳೆಗಾರರ ಸಭೆ ವಿಫಲವಾಗಿಲ್ಲ. ನಾವು ರೈತರು ಹಾಗೂ ಕಾರ್ಖಾನೆ ಮಾಲೀಕರ ಜೊತೆ ಮಾತನಾಡಿದ್ದೇವೆ. ಸಿಎಂ ಮತ್ತು ಡಿಸಿಎಂ ಡಿ.ಕೆ.ಶಿವಕುಮಾರ್ ನೇರವಾಗಿ ಮಾತನಾಡಿದ್ದಾರೆ. ಕೇಂದ್ರ ಸರ್ಕಾರ ಎಂಎಸ್ಪಿ, ಎರ್ಫಿ ಕೊಡಬೇಕು, ಕೇಂದ್ರ ಸರ್ಕಾರ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಹೇಳಿದರು.

– ತಮಿಳುನಾಡಿಗೆ ನೀರು: ಮಳೆ ಬಂದಿದೆ, ಕಬಿನಿಯಿಂದ ನೀರು ಹೋಗುತ್ತಿದೆ. ಡ್ಯಾಂನಿಂದ ನೀರು ಬಿಡುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.


– ಖರ್ಗೆ ವಿರುದ್ಧ ಬಿಜೆಪಿ ಪ್ರತಿಭಟನೆ: ಬಿಜೆಪಿಗೆ ಇನ್ನೇನು ಕೆಲಸ? ಬೇರೆ ಕೆಲಸ ಇಲ್ಲ. ಅಸೆಂಬ್ಲಿಯಲ್ಲಿ ಮಾತನಾಡಲು ವಿಚಾರ ಇಲ್ಲ. 5 ವರ್ಷದಲ್ಲಿ ಮಾಡಿರೋ ಯಾವ ಕೆಲಸವೂ ಇಲ್ಲ. ಮುಂದೆ ಮಾಡ್ತೀನಿ ಅನ್ನೋ ಆತ್ಮಸ್ಥೈರ್ಯ ಕೂಡ ಇಲ್ಲ. ಅದಕ್ಕೆ ಈ ತರಹದ ಪ್ರತಿಭಟನೆ ಮಾಡ್ತಾರೆ, ಮಾಡ್ಲಿ ಬಿಡಿ ಎಂದು ಬಿಜೆಪಿ ಪ್ರತಿಭಟನೆಯ ಬಗ್ಗೆ ಪ್ರತಿಕ್ರಿಯೆ ವ್ಯಕ್ತಪಡಿಸಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109

ಉಪವಿಭಾಗ ಕಛೇರಿ ಸಮೀಪ ಬಾರ್ ಗೆ ಅನುಮತಿ ನೀಡಲು ಸಿದ್ಧತೆ; ಸ್ಥಳ ಪರಿಶೀಲನೆ

ಸೂರ್ಯಪ್ರಗತಿನ್ಯೂಸ್.ಕಾಂ

ಮಧುಗಿರಿ: ಪ್ರಾಚೀನ ಹಾಗೂ ಪುರಾತತ್ವ ಇಲಾಖೆಗೆ ಒಳಪಟ್ಟ ಕಲ್ಯಾಣಿ ಒಂದು ಕಡೆ ಉಪವಿಭಾಗ ಕಚೇರಿ, ಇಂದಿರಾ ಕ್ಯಾಂಟೀನ್, ಪಶು ಇಲಾಖೆ ಮತ್ತು ಮುಸ್ಲಿಂ ಸಮುದಾಯದ ಗೋರಿ ಇವೆಲ್ಲವೂ ಸುತ್ತಲೂ ಇದ್ದು ಇಂತಹ ಜಾಗದಲ್ಲಿ ಹೊಸ ಬಾರು ತೆರೆಯಲು ಸಿದ್ಧತೆ ನಡೆಸುತ್ತಿರುವ ವಿರುದ್ಧ ಭೀಮ್ ಅರ್ಮಿ ಸಂಘಟನೆ ಅಧ್ಯಕ್ಷ ನಟರಾಜ್ ಮೌರ್ಯ ಅಬಕಾರಿ ಅಧಿಕಾರಿಗಳಿಗೆ ದೂರು ನೀಡಿದ್ದು ಇಲ್ಲಿ ಯಾವುದೇ ಕಾರಣಕ್ಕೂ ಅನುಮತಿ ನೀಡಬಾರದು ಈಗಾಗಲೇ ಗಂಧರ್ವ ಬಾರ್ ಅಂಡ್ ರೆಸ್ಟೋರೆಂಟ್ ಎನ್ನುವ ಮದ್ಯದ ಅಂಗಡಿ ಕಾರ್ಯನಿರ್ವಹಿಸುತ್ತಿದ್ದು ಇದರ ಪಕ್ಕದಲ್ಲಿ ಹೊಸ ಬಾರ್ ತೆರೆಯಲು ಅರ್ಜಿ ಸಲ್ಲಿಸಿರುವ ವಿರುದ್ಧ ಭೀಮ್ ಆರ್ಮಿ ಸಂಘಟನೆಯು ಅಬಕಾರಿ ಇಲಾಖೆಗೆ ದೂರು ಸಲ್ಲಿಸಿದ್ದರು ಅವರು ನೀಡಿದ ದೂರಿನ ಅನ್ವಯ ಅಬಕಾರಿ ಇಲಾಖೆ ಅಧಿಕಾರಿಗಳು ಸ್ಥಳ ಪರಿಶೀಲನೆ ನಡೆಸಿ ಅಳತೆ ಮಾಡಿರುತ್ತಾರೆ ಭೀಮ್ ಅರ್ಮಿ ಸಂಘಟನೆಯ ಆರೋಪಗಳೇನೆಂದರೆ ಈ ಜಾಗದ ಸುತ್ತಮುತ್ತ ಪ್ರಾಚೀನ ಕಾಲದ ಕಲ್ಯಾಣಿ ಹಾಗೂ ಹಿಂದೂ ಮುಸ್ಲಿಂ ವಾಸಿಸುತ್ತಿರುವ ಐಕ್ಯತಾ ಜಾಗ ಮತ್ತು ಮುಸ್ಲಿಂ ಸಮುದಾಯದ ಗೋರಿ ಇದ್ದು ಮುಖ್ಯ ರಸ್ತೆಯಲ್ಲಿ ಸರ್ಕಾರಿ ಕಚೇರಿಗಳಾದ ಉಪವಿಭಾಗ



ಕಚೇರಿ , ಪಶು ಇಲಾಖೆ, ಇಂದಿರಾ ಕ್ಯಾಂಟೀನ್ ,ಖಾಸಗಿ ಬಸ್ ಸ್ಟ್ಯಾಂಡ್ ಹಾಗೂ ಪ್ರವಾಸಿಗರು ವಿಶ್ವವಿಖ್ಯಾತ ಏಕಾಶಿಲಾ ಬೆಟ್ಟ ನೋಡಲು ತೆರಳುವ ಕೋಟೆಯ ಮುಖ್ಯದ್ವಾರ ಸಮೀಪದಲ್ಲಿದ್ದು ಇಂತಹ ಸ್ಥಳದಲ್ಲಿ ಇನ್ನೊಂದು ಮದ್ಯದ ಅಂಗಡಿ ಸ್ಥಾಪನೆ ಸರಿಯಾದ ಕ್ರಮವಲ್ಲ ಎಂದು ಅಧಿಕಾರಿಗಳಿಗೆ ದೂರು ಸಲ್ಲಿಸಿದ್ದಾರೆ.

ಶಾಸಕ ಕೆ.ಎನ್.ರಾಜಣ್ಣನವರು ಮಧುಗಿರಿ ಕ್ಷೇತ್ರವನ್ನು ವಿವಿಧ ರೂಪಗಳಲ್ಲಿ ಅಭಿವೃದ್ಧಿ ಪಡಿಸಲು ಶಾಸಕರು ಮತ್ತು ಅವರ ಪುತ್ರ ಎಂಎಲ್ಸಿ ರಾಜೇಂದ್ರ ರವರು ಜೋಡೆತ್ತುಗಳಂತೆ ಅವಿರತವಾಗಿ ಶ್ರಮ ಹಾಕುತ್ತಿದ್ದು ಎಲ್ಲರಿಗೂ ತಿಳಿದಿರುವ ವಿಚಾರವೇ. ಶಾಸಕರು ಕ್ಷೇತ್ರದ ಜನತೆಗೆ ಆರ್ಥಿಕವಾಗಿ ಮುಂದೆ ಬರಲು ಅನೇಕ ಯೋಜನೆಗಳನ್ನು ಕೈಗೊಳ್ಳುವ ಪ್ರಯತ್ನ ನಡೆಸುತ್ತಾ ಕೈಗಾರಿಕೆ ತಂದು ಮಹಿಳೆಯರಿಗೆ -ಯುವಕರಿಗೆ ಉದ್ಯೋಗ ನೀಡಬೇಕೆಂದು ಬಹಳಷ್ಟು ಕನಸುಗಳನ್ನು ಹೊತ್ತು ಹಗಲು ಇರುಳು ಶ್ರಮಿಸುತ್ತಿದ್ದಾರೆ ಹೀಗಿರುವಾಗ ಕೆಲ ಮದ್ಯದ ಅಂಗಡಿಯ ಮಾಲೀಕರು ಮಾತ್ರ ತಾವಾಯಿತು ತಮ್ಮ ಲಾಭವಾಯಿತು ಎನ್ನುವಂತೆ ಸಿಕ್ಕ ಸಿಕ್ಕ ಕಡೆಗಳಲ್ಲಿ ಹೊಸ ಬಾರ್ ಗಳನ್ನು ತೆರೆಯಲು ತುದಿಗಾಲಲ್ಲಿ ಕಾಯುತ್ತಿದ್ದಾರೆ ನಿರುದ್ಯೋಗ ಸಮಸ್ಯೆ ನಿವಾರಣೆಗೆ ಕೆ.ಎನ್.ಆರ್ ಹಾಗೂ ರಾಜೇಂದ್ರ ನಿಂತರೆ ಬಾರ್ ಮಾಲಿಕರು ಮಾತ್ರ ತಮ್ಮ ಸ್ವಂತ ಲಾಭಕ್ಕಾಗಿ ಬಾರ್ ಮೇಲೆ ಬಾರ್ ಎನ್ನುವಂತೆ ಕಾರು ಬಾರು ನಡೆಸುತ್ತಿದ್ದಾರೆ ಎಂದು ಸಾರ್ವಜನಿಕ ವಲಯದಲ್ಲಿ ಸಾಕಷ್ಟು ಚರ್ಚೆಗೆ ಗ್ರಾಸವಾಗಿದೆ.

(((((ಪ್ರಾಚೀನ ಐತಿಹಾಸಿಕ ಸ್ಥಳಗಳು ಮುಂದಿನ ಪೀಳಿಗೆಗೆ ಉಳಿಸುವ ಪ್ರಯತ್ನ ಪ್ರತಿಯೊಬ್ಬ ನಾಗರೀಕನ ಕರ್ತವ್ಯವಾಗಿದ್ದು ಇಂತಹ ಐತಿಹಾಸಿಕ ಸ್ಥಳದಲ್ಲಿ ಬಾರ್ ಗಳು ಪ್ರಾರಂಭ ಮಾಡಲು ಬಿಡುವುದಿಲ್ಲ ಉಚ್ಚ ನ್ಯಾಯಾಲಯದಲ್ಲಿ ಸಾರ್ವಜನಿಕ ಹಿತಾಸಕ್ತಿ ದಾವೆ ಹಾಕಲು ಸಿದ್ಧತೆ ಮಾಡಿಕೊಂಡಿದ್ದೇನೆ ...
ನಟರಾಜ್ ಮೌರ್ಯ ತಾಲೂಕು ಅಧ್ಯಕ್ಷರು ಭೀಮ್ ಆರ್ಮಿ ಸಂಘಟನೆ)))))))

ವೈಜ್ಞಾನಿಕ ಕನಿಷ್ಠ ವೇತನ ಜಾರಿಗೊಳಿಸಿ;

ಕಾರ್ಮಿಕ ಸಹಿತೆಗಳಿಗೆ ತಿದ್ದುಪಡಿ, ಗುತ್ತಿಗೆ ಕಾರ್ಮಿಕರಿಗೆ ನೇರ ಪಾವತಿ



ಬಾಧಿತ ಕಾರ್ಮಿಕರಿ ಪರಿಹಾರ – ಸಿಐಟಿಯು ನಿಯೋಗ–ಕಾರ್ಮಿಕ ಇಲಾಖೆ ಕಾರ್ಯದರ್ಶಿಗಳಿಗೆ ಭೇಟಿ ಕರ್ನಾಟಕದಲ್ಲಿ ವೈಜ್ಞಾನಿಕ ಕನಿಷ್ಠ ವೇತನ ಪುನರ್ವಿಮರ್ಶೆ ಮತ್ತು ಕಾರ್ಮಿಕರ ಮೂಲಭೂತ ಹಕ್ಕುಗಳ ರಕ್ಷಣೆಗಾಗಿ ಸಿಐಟಿಯು ರಾಜ್ಯ ನಿಯೋಗವು ಒತ್ತಾಯಿಸಿದೆ. 2022ರಲ್ಲಿ ಬಿಜೆಪಿ ಸರ್ಕಾರ ಅವೈಜ್ಞಾನಿಕವಾಗಿ ಪರಿಷ್ಕರಿಸಿದ ಕನಿಷ್ಠ ವೇತನವನ್ನು ಹೈಕೋರ್ಟ್ ರದ್ದುಗೊಳಿಸಿದ್ದರೂ, ಇನ್ನೂ ಅಂತಿಮ ಅಧಿಸೂಚನೆ ಪ್ರಕಟವಾಗಿಲ್ಲ. ಕಾರ್ಮಿಕ ಸಂಘಟನೆಗಳ ಬೇಡಿಕೆಯಂತೆ ದಿನಗೂಲಿ 1304 1799 ಮತ್ತು ಮಾಸಿಕ 33,902 46,780 ನಿಗದಿಪಡಿಸಬೇಕು. ನಿರಂತರ ಬೆಲೆ ಏರಿಕೆಯಿಂದಾಗಿ ಕಾರ್ಮಿಕರು ಸಂಕಷ್ಟಗಳು ಹೆಚ್ಚಿವೆ. ಇದಲ್ಲದೆ ಕಳೆದ 7 ವರ್ಷಗಳಿಂದ ಕನಿಷ್ಟ ಕೂಲಿ ಪರಿಕ್ಷರಣೆ ಮಾಡದೆ ಇರುವುದು ಸರಿಯಲ್ಲ. ಸುಪ್ರೀಂ ಕೋರ್ಟ ತೀರ್ಪಿನಂತೆ ಕನಿಷ್ಟ ಕೂಲಿಯನ್ನು ಪರಿಷ್ಕರಿಸಿ ತಕ್ಷಣವೆ ಅದೇಶಿಸುವಂತೆ ನೀಯೋಗವು ಒತ್ತಾಯಿಸಿತು. ಅಲ್ಲದೆ, ಕಾರ್ಮಿಕ ವಿರೋಧಿ 4 ಸಹಿತೆಗಳಿಗೆ ಕಾರ್ಮಿಕ ಪರ ತಿದ್ದುಪಡಿ ತರದೆ ರಾಜ್ಯದಲ್ಲಿ ಜಾರಿಗೊಳಿಸಬಾರದು. ಗುತ್ತಿಗೆ ಪದ್ಧತಿ ರದ್ದುಪಡಿಸಿ, ಎಲ್ಲ ಖಾಯಮೇತರ ಕಾರ್ಮಿಕರನ್ನು ಖಾಯಂಗೊಳಿಸಬೇಕು. ಖಾಯಂಗೊಳಿಸುವ ತನಕ ನೇರ ಪಾವತಿಯಡಿಯಲ್ಲಿ ಕಾರ್ಮಿಕರನ್ನು ನೇಮಿಸುವಂತೆ ದಿನಾಂಕ; 17–04–2026 ರಂದು ಕರ್ನಾಟಕ ರಾಜ್ಯ ಕಾರ್ಮಿಕ ಇಲಾಖೆ ಕಾರ್ಯಧರ್ಶಿ ಶ್ರೀಮತಿ ಸಲ್ಮಾ.ಕೆ. ಪಾತಿಮಾ ಅವರನ್ನು ಸಿಐಟಿಯು ನಿಯೋಗವು ಮನವಿ ಮಾಡಿದೆ. ಯುದ್ಧದಿಂದಾಗಿ ಉಂಟಾಗಿರುವ ಪರಿಸ್ಥಿತಿಯಲ್ಲಿ ಆಟೋ– ಟ್ಯಾಕ್ಸಿ ಚಾಲಕರು ಇಂಧನ ಸಿಗದೆ ತ್ರೀವರ್ತರ ತೊಂದರೆ ಅಗಿದೆ. ಸಣ್ಣ– ಪುಟ್ಟ ಹೋಟಲ್ ಗಳ ಮುಚ್ಚಿವೆ ಇದನ್ನು ನಂಬಿರುವ ಕಾರ್ಮಿಕರು ಸಂಕಟಕ್ಕೆ ಸಿಲುಕಿದ್ದಾರೆ. ಹಾಗಾಗಿ ಬಾಧಿತ ಚಾಲಕರಿಗೆ ಮತ್ತು ಹೋಟಲ್ ಕಾರ್ಮಿಕರಿಗೆ ಸರ್ಕಾರ ಪರಿಹಾರ ನೀಡುವಂತೆ ಸಹ ನಿಯೋಗವು ಮನವಿ ಮಾಡಿದೆ. ವಿಚಾರಗಳನ್ನು ಅಲಿಸಿದ ಕಾರ್ಮಿಕ ಇಲಾಖೆಯ ಕಾರ್ಯಧರ್ಶಿ ಶ್ರೀಮತಿ ಸಲ್ಮಾ ಕೆ. ಪಾತಿಮಾ ಹಾಗು ಜಂಟಿ ಕಾರ್ಮಿಕ ಅಯುಕ್ತರಾದ ಎಸ್. ಬಿ. ರವಿಕುಮಾರ್ ಅವರು ಈ ಕುರಿತು ಸಚಿವರು ಮತ್ತು ಮುಖ್ಯ ಮಂತ್ರಿಗಳ ಜೊತೆಯಲ್ಲಿ ಚರ್ಚಿಸಿ ಪರಿಶಿಲಿಸಿ ಕ್ರಮವಹಿಸುವುದಾಗಿ ನುಡಿದರು.

ಸಿಐಟಿಯು ನಿಂಯೋಗದಲ್ಲಿ ರಾಜ್ಯ ಅಧ್ಯಕ್ಷರಾದ ಮಿನಾಕ್ಷಿ ಸುಂದರಂ, ಪ್ರಧಾನ ಕಾರ್ಯಧರ್ಶಿ ಎಸ್. ವರಲಕ್ಷ್ಮಿ ಉಪಾಧ್ಯಕ್ಷರಾದ ಸೈಯದ್ ಮುಜೀಬ್ , ಪ್ರತಾಪ್ ಸಿಂಹ,ಅವರು ಇದ್ದರು.

ಕಂಪ್ಯೂಟರ್ ಟ್ಯಾಲಿ ತರಬೇತಿಗೆ ಅರ್ಜಿ ಆಹ್ವಾನ

ತುಮಕೂರು: ಹಿರೇಹಳ್ಳಿ ಎಸ್.ಬಿ.ಐ. ಗ್ರಾಮೀಣ ಸ್ವ–ಉದ್ಯೋಗ ತರಬೇತಿ ಸಂಸ್ಥೆಯು ನವೆಂಬರ್ 16 ರಿಂದ 38 ದಿನಗಳ ಕಂಪ್ಯೂಟರ್ ಟ್ಯಾಲಿ ತರಬೇತಿ ನೀಡಲು ಗ್ರಾಮೀಣ ಭಾಗದ ನಿರುದ್ಯೋಗಿ ಯುವಕ/ಯುವತಿಯರಿಂದ ಅರ್ಜಿ ಆಹ್ವಾನಿಸಿದೆ.

ಜಿಲ್ಲಾ ವ್ಯಾಪ್ತಿಯ ಗ್ರಾಮೀಣ ಭಾಗದ ಕನ್ನಡ ಓದಲು ಮತ್ತು ಬರೆಯಲು ಬರುವ 18 ರಿಂದ 50 ವರ್ಷದೊಳಗಿನ ಅರ್ಹ ಅಭ್ಯರ್ಥಿಗಳು ಖುದ್ದಾಗಿ ಅಥವಾ ಅಂಚೆ ಮೂಲಕ ನವೆಂಬರ್ 10ರೊಳಗೆ ಅರ್ಜಿ ಸಲ್ಲಿಸಬಹುದಾಗಿದೆ. ತರಬೇತಿ ಅವಧಿಯಲ್ಲಿ ಉಚಿತ ಊಟ ಮತ್ತು ವಸತಿ ಸೌಲಭ್ಯ ಕಲ್ಪಿಸಲಾಗುವುದು. ಹೆಚ್ಚಿನ ಮಾಹಿತಿಗಾಗಿ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಗ್ರಾಮೀಣ ಸ್ವ ಉದ್ಯೋಗ ತರಬೇತಿ ಸಂಸ್ಥೆ, ಸಿಂಗನಹಳ್ಳಿ ಕಾಲೋನಿ, ಹಿರೇಹಳ್ಳಿ ಕೈಗಾರಿಕಾ ಪ್ರದೇಶ(ತುಮಕೂರು ನಿರ್ಮಿತಿ ಕೇಂದ್ರದ ಹತ್ತಿರ), ತುಮಕೂರು–572104 ಅಥವಾ ಮೊ.ಸಂ. 9738351048/ 9663680001ನ್ನು ಸಂಪರ್ಕಿಸಬೇಕೆಂದು ಸಂಸ್ಥೆಯ ನಿರ್ದೇಶಕ ವಾದಿರಾಜ್ ಕೆ.ಎನ್. ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ನವೋದ್ಯಮ ಪ್ರಾರಂಭಿಸಲು ಅರ್ಜಿ ಆಹ್ವಾನ

ತುಮಕೂರು: ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮವು ನವೋದ್ಯಮಗಳನ್ನು ಪ್ರಾರಂಭಿಸಲು ಅಲ್ಪಸಂಖ್ಯಾತ ಯುವಕ/ಯುವತಿಯರಿಂದ ಅರ್ಜಿ ಆಹ್ವಾನಿಸಲಾಗಿದೆ.

ಕ್ರಿಶ್ಚಿಯನ್ ಸಮುದಾಯ ಹೊರತುಪಡಿಸಿ ಮುಸ್ಲಿಂ, ಜೈನ್, ಸಿಖ್, ಪಾರ್ಸಿ, ಬೌದ್ಧ ಸಮುದಾಯದವರು ಅರ್ಜಿ ಸಲ್ಲಿಸಬಹುದಾಗಿದೆ. ಆಸಕ್ತರು ನವೆಂಬರ್ 13ರೊಳಗಾಗಿ ಜಾಲತಾಣ https://eitbt.karnatka.gov.in/en ಮೂಲಕ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂ.ವಾ.ಸಂ. 0816–2281023 ಅಥವಾ ಇ–ಮೇಲ್: dmkmdc.tumkur@gmail.com ಅಥವಾ ಜಿಲ್ಲಾ ವ್ಯವಸ್ಥಾಪಕರ ಕಚೇರಿ, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ, ಮೌಲಾನಾ ಅಜಾದ್ ಭವನ, ಉಪ್ಪಾರಹಳ್ಳಿ, ಇಂದಿರಾ ಕಾಲೇಜು, ತುಮಕೂರು ಕಚೇರಿಯನ್ನು ಸಂಪರ್ಕಿಸಬೇಕೆಂದು ಪ್ರಕಟಣೆ ತಿಳಿಸಿದೆ.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ದೇವರ ದಯೆಯಿಂದ ನನ್ನ ಆರೋಗ್ಯ ಸ್ಥಿರವಾಗಿದೆ:

ಸೂರ್ಯಪ್ರಗತಿನ್ಯೂಸ್.ಕಾಂ

ಯಾರೂ ಆತಂಕ ಪಡುವ ಅಗತ್ಯವಿಲ್ಲ ಎಂದ ಡಾ.ಪರಮೇಶ್ವರ್

ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರು ಕ್ರೀಡಾಕೂಟದ ವೇಳೆ ಹೃದಯಬಡಿತ ಹೆಚ್ಚಾಗಿ ಆಸ್ಪತ್ರೆಗೆ ದಾಖಲಾಗಿದ್ದರೂ, ಅವರ ಆರೋಗ್ಯ ಈಗ ಸಂಪೂರ್ಣ ಸ್ಥಿರವಾಗಿದೆ. ಸಿದ್ದರಾಮಯ್ಯನವರ ಭೇಟಿಯ ನಂತರ, ಪರಮೇಶ್ವರ್ ಹೃದಯಕ್ಕೆ ಯಾವುದೇ ತೊಂದರೆಯಿಲ್ಲ ಹಾಗೂ ಬಿಪಿ ನಾರ್ಮಲ್ ಆಗಿದೆ ಎಂದು ಸ್ಪಷ್ಟಪಡಿಸಲಾಗಿದೆ. ಆಸ್ಪತ್ರೆಯಲ್ಲಿ ಇತರ ರೋಗಿಗಳಿಗೆ ತೊಂದರೆಯಾಗಬಾರದೆಂದು ಅವರನ್ನು ಭೇಟಿ



ಮಾಡದಂತೆ ಪರಮೇಶ್ವರ್ ಮನವಿ ಮಾಡಿದ್ದಾರೆ. ಕರ್ನಾಟಕ ಬ್ಯಾಡ್ಮಿಂಟನ್ ಅಸೋಸಿಯೇಷನ್ ಆಯೋಜಿಸಿದ್ದ ಕ್ರೀಡಾಕೂಟದ ಉದ್ಘಾಟನಾ ಸಮಾರಂಭದ ವೇಳೆ ಹಠಾತ್ ಹೃದಯಬಡಿತ ಹೆಚ್ಚಾಗಿ ಆಸ್ಪತ್ರೆಗೆ ದಾಖಲಾಗಿದ್ದ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರ ಆರೋಗ್ಯ ಪರಿಸ್ಥಿತಿ ಸಂಪೂರ್ಣವಾಗಿ ಚೇತರಿಸಿಕೊಂಡಿದೆ. ಈ ಕುರಿತು ತಮ್ಮ ಅಧಿಕೃತ 'ಎಕ್ಸ್' (ಎ) ಖಾತೆಯಲ್ಲಿ ಪೋಸ್ಟ್ ಮಾಡಿರುವ ಅವರು, "ದೇವರ ದಯೆಯಿಂದ ನನ್ನ ಆರೋಗ್ಯವೀಗ ಸ್ಥಿರವಾಗಿದೆ, ಸಾರ್ವಜನಿಕರು ಹಾಗೂ ಬೆಂಬಲಿಗರು ಯಾರೂ ಆತಂಕ ಪಡುವ ಅಗತ್ಯವಿಲ್ಲ" ಎಂದು ತಿಳಿಸಿದ್ದಾರೆ. ಆಸ್ಪತ್ರೆಗೆ ಭೇಟಿ ನೀಡಿ ಪರಮೇಶ್ವರ್ ಅವರ ಆರೋಗ್ಯ ವಿಚಾರಿಸಿದ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಡಿಸಿಎಂ ಅವರ ಬಿಪಿ ನಾರ್ಮಲ್ ಆಗಿದೆ ಹಾಗೂ ಅವರ ಹೃದಯಕ್ಕೆ ಯಾವುದೇ ತೊಂದರೆಯಿಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ಮಹಿರ್ಷಿ ವಾಲ್ಮೀಕಿರವರ ಜೀವನ ಚರಿತ್ರೆ ಪ್ರಪಂಚಕ್ಕೆ ಆದರ್ಶ

ಸೂರ್ಯಪ್ರಗತಿನ್ಯೂಸ್.ಕಾಂ

ಕೊರಟಗೆರೆ– ಮಹಿರ್ಷಿ ವಾಲ್ಮೀಕಿರವರ ಅವರ ಜೀವನ ಚರಿತ್ರೆ ಪ್ರಪಂಚಕ್ಕೆ ಆದರ್ಶವಾಗಿದ್ದು ಅವರ ಸಂತತಿಯಾದ ನಾಯಕ ಜನಾಂಗದವರಾದ ನಾವುಗಳು ವಿದ್ಯಾವಂತರಾಗಿ ಸಮಾಜದಲ್ಲಿ ಉನ್ನತ ಸ್ಥಾನಕ್ಕೆ ಬರಬೇಕಿದೆ ಎಂದು ದೊಡ್ಡಬಳ್ಳಾಪುರದ ವಾಲ್ಮೀಕಿ ಗುರು ಪೀಠದ ಗುರುಗಳಾದ ಬ್ರಹ್ಮಾನಂದ ಸ್ವಾಮೀಜಿ ತಿಳಿಸಿದರು.

ಅವರು ಕೊರಟಗೆರೆ ತಾಲ್ಲೂಕು ಹೊಳವನಹಳ್ಳಿ ಹೋಬಳಿಯ ಹೊನ್ನಾರನಹಳ್ಳಿ ಗ್ರಾಮದಲ್ಲಿ ನಡೆದ ಅದ್ದೂರಿ ಮಹರ್ಷಿ ವಾಲ್ಮೀಕಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿ ಮಹರ್ಷಿ ವಾಲ್ಮೀಕಿ ರವರು ರಚಿಸಿದ ರಾಮಾಯಣವು ಮಾನವೀಯ ಮೌಲ್ಯಗಳು, ಧರ್ಮ, ಸತ್ಯ ಮತ್ತು ನ್ಯಾಯದ ಮಹತ್ವವನ್ನು ಸಾರುತ್ತವೆ ಅವರ ಆದರ್ಶಗಳನ್ನು ಪ್ರತಿಯೊಬ್ಬ ವ್ಯಕ್ತಿಯೂ ತಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು ಎಂದರು.




ವಾಲ್ಮೀಕಿ ಜನಾಂಗದ ನಾವುಗಳು ಎಷ್ಟೇ ಬಡತನವಿದ್ದರೂ ನಮ್ಮ ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡಬೇಕು, ಅವರನ್ನು ಸಮಾಜದಲ್ಲಿ ಎಲ್ಲವನ್ನು ಎದುರಿಸಿ ಉತ್ತಮ ಪ್ರಜೆಯಾಗುವ ಮತ್ತು ಉನ್ನತ ಸ್ಥಾನಕ್ಕೆ ಹೋಗುವ ಮನಸ್ಥಿತಿ ತರಬೇಕು, ಮಕ್ಕಳನ್ನು ದುಶ್ಚಟಗಳಿಗೆ ಬಲಿಯಾಗದಂತೆ ತಂದೆ ತಾಯಿಗಳು ಜಾಗ್ರತೆ ವಹಿಸಬೇಕು, ಮಕ್ಕಳನ್ನು ಸರಿ ದಾರಿಗೆ ತಾರದೆ ಇದ್ದರೆ ಅದರ ತಪ್ಪು ತಂದೆ ತಾಯಿಗಳಾಗಿರುತ್ತದೆ ಎಂದರು.

ಜಯಂತಿಯಲ್ಲಿ ನೂರಾರು ಮಹಿಳೆಯರು ಕುಂಭ ಕಳಸದ ಮೂಲಕ ಸ್ವಾಮೀಜಿರವರನ್ನು ಮೆರವಣಿಗೆಯಲ್ಲಿ ಬರಮಾಡಿಕೊಂಡರು, ವೀರಗಾಸೆ, ಡೊಳ್ಳು ಕುಣಿತ, ಜನಪದ ವಾದ್ಯಗಳು ಇದ್ದವು, ಜಯಂತಿ ಪ್ರಯುಕ್ತ ಗ್ರಾಮದಲ್ಲಿ ನೂರಾರು ಜನರಿಗೆ ಸಿಹಿ ಭೋಜನವನ್ನು ಏರ್ಪಡಿಸಲಾಗಿತ್ತು.

ಕಾರ್ಯಕ್ರಮದಲ್ಲಿ ಮುಖಂಡರಾದ ತೀರ್ಥಕುಮಾರ್, ರಾಘವೇಂದ್ರ, ರಾಮಣ್ಣ, ನರಸಿಂಹಮೂರ್ತಿ, ವೀರಣ್ಣ, ಶಶಿಕುಮಾರ್, ರಮೇಶ್ , ರವಿಕುಮಾರ್, ಕಾಳಿಚರಣ್, ಮಂಜುನಾಥ್, ಸೇರಿದಂತೆ ವಾಲ್ಮೀಕಿ ಸಮುದಾಯದ ಮುಖಂಡರು ಹಾಜರಿದ್ದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ
ಜಾಹೀರಾತಿಗಾಗಿ ಸಂಪರ್ಕಿಸಿ: 9901010109



ರೋಟರಿಯಿಂದ ಪ್ರಚಾರಕರ ದಿನಾಚರಣೆ



ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ರೋಟರಿ ತುಮಕೂರು ಸಂಸ್ಥೆಯಿಂದ ನಗರದ ರೋಟರಿ ಬಾಲ ಭವನದಲ್ಲಿ ರಾಷ್ಟ್ರೀಯ ಪ್ರಚಾರಕರ ದಿನಾಚರಣೆ ಹಮ್ಮಿಕೊಳ್ಳಲಾಗಿತ್ತು. ಇದರ ಅಂಗವಾಗಿ ಪತ್ರಕರ್ತ ಮಣ್ಣೆ ರಾಜು ಅವರನ್ನು ಸನ್ಮಾನಿಸಿ ಗೌರವಿಸಲಾಯಿತು. ರೋಟರಿ ತುಮಕೂರು ಅಧ್ಯಕ್ಷೆ ಭಾಗ್ಯಲಕ್ಷ್ಮಿ ನಾಗರಾಜ್ ಮಾತನಾಡಿ, ನಾವು ಮಾಡುವ ಒಳ್ಳೆ ಕೆಲಸ ಇತರರಿಗೆ ಪ್ರೇರಣೆ ಆಗಬೇಕು. ಆ ಕೆಲಸದ ಫಲ ಅಗತ್ಯವಿರುವವರಿಗೆ ತಲುಪಬೇಕು ಎಂದರು.

ಈ ಸಂದರ್ಭದಲ್ಲಿ ಸಂಜನ್ ನಾಗರಾಜ್ ಹಾಗೂ ತಂಡದಿಂದ ಸಂಗೀತ ಸಂಜೆ ಕಾರ್ಯಕ್ರಮ ನಡೆಯಿತು. ರೋಟರಿ ಕಾರ್ಯದರ್ಶಿ ಚಂದ್ರಕಲಾಎಸ್, ಅಸಿಸ್ಟೆಂಟ್ ಗವರ್ನರ್ ಸಿ.ನಾಗರಾಜ್, ಸೌಮ್ಯ ಹಿರೇಮಠ, ನಾಗೇಶ್ ಕುಮಾರ್, ಮಲ್ಲೇಶಯ್ಯ ರವಿಶಂಕರ್, ಹೆಚ್.ಮಲ್ಲಿ ಕಾರ್ಜುನ್, ಕರಣಂ ರಮೇಶ್, ಎಂ.ಆರ್.ರಘು, ಹೇಮ ಮಲ್ಲಿಕಾರ್ಜುನ್, ಸುಷ್ಮಾ, ವೀರೇಶ್ ಮೊದಲಾದವರು ಭಾಗವಹಿಸಿದ್ದರು.

"ಕನಸಿನ ವೃತ್ತಿಜೀವನದತ್ತ ಒಂದು ಹೆಜ್ಜೆ"

ಈ ಉದ್ಯೋಗ ಮೇಳದಲ್ಲಿ BBA, B.Com, MBA ಹಾಗೂ M.Com ಕೋರ್ಸ್‌ಗಳ 2026–27ನೇ ಸಾಲಿನ ಪಾಸ್‌ಔಟ್ ವಿದ್ಯಾರ್ಥಿಗಳು ಭಾಗವಹಿಸಲು ಅವಕಾಶವಿದೆ. ವಿವಿಧ ಕ್ಷೇತ್ರಗಳ ಪ್ರತಿಷ್ಠಿತ ಸಂಸ್ಥೆಗಳು ಈ ನೇಮಕಾತಿ ಪ್ರಕ್ರಿಯೆಯಲ್ಲಿ ಭಾಗವಹಿಸಲಿದ್ದು, 247.ai, Qspiders, Corizo Edutech Pvt. Ltd., Muthoot Home Finance, HDFC Life, Square Yards ಹಾಗೂ Ediglobe Techsphere Pvt. Ltd. ಸೇರಿದಂತೆ ಹಲವು ಕಂಪನಿಗಳು ವಿದ್ಯಾರ್ಥಿಗಳಿಗೆ ಉದ್ಯೋಗಾವಕಾಶಗಳನ್ನು ಒದಗಿಸಲಿವೆ. ವಿದ್ಯಾರ್ಥಿಗಳಿಗೆ ತಮ್ಮ ವಿದ್ಯಾರ್ಹತೆ ಮತ್ತು ಕೌಶಲ್ಯಕ್ಕೆ ತಕ್ಕ ಉದ್ಯೋಗವನ್ನು ಪಡೆಯಲು ಇದು ಉತ್ತಮ ವೇದಿಕೆಯಾಗಲಿದೆ. ಕ್ಯಾಂಪಸ್ ಡ್ರೈವ್‌ನಲ್ಲಿ ಭಾಗವಹಿಸುವ ವಿದ್ಯಾರ್ಥಿಗಳು 3–5 ಪ್ರತಿಗಳ ರೆಸ್ಯೂಮ್, ಸರ್ಕಾರದ ಗುರುತಿನ ಚೀಟಿ ಹಾಗೂ ಸಂದರ್ಶನಕ್ಕೆ ಸೂಕ್ತವಾದ ಉಡುಪು ಧರಿಸಿ ಹಾಜರಾಗುವಂತೆ ಸೂಚಿಸಲಾಗಿದೆ.

ಈ ಕಾರ್ಯಕ್ರಮಕ್ಕೆ 31 ಅಕ್ಟೋಬರ್ ಬೆಳಿಗ್ಗೆ 9.30ಕ್ಕೆ ವರದಿ ಮಾಡಿಕೊಳ್ಳಬೇಕು. ಉದ್ಯೋಗ ಮೇಳದಲ್ಲಿ ಭಾಗವಹಿಸಲು ನೋಂದಣಿಯ ಕೊನೆಯ ದಿನಾಂಕ ಅಕ್ಟೋಬರ್ 29 ಆಗಿದ್ದು, BBA, B.Com, M.Com ಮತ್ತು MBA ಪದವೀಧರರು ಯಾವುದೇ ಬ್ಯಾಕ್‌ಲಾಗ್ ಇಲ್ಲದಿರುವುದು ಅರ್ಹತೆಯಾಗಿದೆ. ವಿದ್ಯಾರ್ಥಿಗಳು ಈ ಅವಕಾಶವನ್ನು ಸದುಪಯೋಗಪಡಿಸಿಕೊಂಡು ತಮ್ಮ ವೃತ್ತಿಜೀವನಕ್ಕೆ ಉತ್ತಮ ಆರಂಭ ನೀಡಬೇಕು ಎಂದು ಸಂಸ್ಥೆಯು ಕರೆ ನೀಡಿದೆ. "ಕನಸಿನ ವೃತ್ತಿಜೀವನದತ್ತ ಒಂದು ಹೆಜ್ಜೆ" ಎಂಬ ಆಶಯದೊಂದಿಗೆ ಆಯೋಜಿಸಿರುವ ಈ ಪೂಲ್ ಕ್ಯಾಂಪಸ್ ಡ್ರೈವ್ ಯುವ ಪದವೀಧರರಿಗೆ ಉದ್ಯೋಗದ ಹೊಸ ಅವಕಾಶಗಳನ್ನು ತೆರೆದಿಡುವ ನಿರೀಕ್ಷೆಯಿದೆ. ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಈ ಒಂದು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಈ ಅವಕಾಶವನ್ನು ಸದುಪಯೋಗಪಡಿಸಿಕೊಳ್ಳಬೇಕು.

ಕಡಮಲಕುಂಟೆ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಸಮಸ್ಯೆ

ಸೂರ್ಯಪ್ರಗತಿನ್ಯೂಸ್.ಕಾಂ

ಪಾವಗಡ : ಪಾವಗಡ ತಾಲ್ಲೂಕಿನ ಕೊಡಮೊಡಗು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಕಡಮಲಕುಂಟೆ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಸಮಸ್ಯೆ ಸಂಬಂಧಿಸಿದಂತೆ ಸ್ಥಳೀಯ ಅಧಿಕಾರಿಗಳ ಗಮನಕ್ಕೆ ತಂದರೂ ಸಮಸ್ಯೆ ನಿವಾರಣೆಯಲ್ಲಿ ನಿರ್ಲಕ್ಷ್ಯವಹಿಸುತ್ತ ಬೇಜವಾಬ್ದಾರಿಯಾಗಿ ಮುನ್ನಡೆಯುತ್ತಿರುವುದರಿಂದ ಪಕ್ಕದಲ್ಲಿನ ಆಂಧ್ರ ಪ್ರದೇಶದ ಪೆನುಗೊಂಡ,ರೊದ್ದಂ ಮಂಡಲಂ ಮೂಲದ ವ್ಯಕ್ತಿಯೊಬ್ಬ ದಿನ ನಿತ್ಯ ಸರಬರಾಜು ಮಾಡುತ್ತಿದ್ದ ವಾಟರ್ ಟ್ಯಾಂಕ್ ನೀರು ಖರೀದಿಸಿ ಸೇವನೆ ಮಾಡುವ ಸ್ಥಿತಿ ನಿರ್ಮಾಣವಾಗಿದೆ ಎಂದು ಕಡಮಲಕುಂಟೆ ಗ್ರಾಮಸ್ಥರು ಸ್ಥಳೀಯ ಅಧಿಕಾರಿಗಳ ಮೇಲೆ ಆರೋಪಿಸಿದ್ದಾರೆ. ದಿನಾಂಕ 26/03/2026 ರಂದು ಮಾನ್ಯ ತುಮಕೂರು ಜಿಲ್ಲಾಧಿಕಾರಿಗಳಾದ ಶುಭ ಕಲ್ಯಾಣ್ ಎಂಬುವರ ನೇತೃತ್ವದಲ್ಲಿ ಪಾವಗಡ ತಾಲ್ಲೂಕಿನ ತಹಶೀಲ್ದಾರ್ ಕಾರ್ಯಾಲಯದಲ್ಲಿ ಮತ್ತು ಸಿ.ಕೆ. ಪುರ ಗ್ರಾಮದಲ್ಲಿ ಜನ ಸಂಪರ್ಕ ಕಾರ್ಯಕ್ರಮ ನಡೆದಿರುವ ಸಂದರ್ಭದಲ್ಲಿ ಸಮಾಜ ಸೇವಕರಾದ ಕಡಮಲಕುಂಟೆ ಗ್ರಾಮದ ಗೋವಿಂದಪ್ಪ ಎನ್ ಎಂಬುವರು ಕಡಮಲಕುಂಟೆ ಗ್ರಾಮದಲ್ಲಿ ಶುದ್ಧ ಕುಡಿಯುವ ನೀರಿನ ಸಮಸ್ಯೆ ಹಾಗೂ ಬಳಕೆ ನೀರಿನ ಸಮಸ್ಯೆ ಮತ್ತು ಒಳಚರಂಡಿ ಸಮಸ್ಯೆ ಸಂಬಂಧಿಸಿದಂತೆ ಸಂಬಂಧ ಪಟ್ಟಿರುವ ಅಧಿಕಾರಿಗಳ ಗಮನಕ್ಕೆ ಹರಿಸಿ ಸಮಸ್ಯೆ ಬಗೆಹರಿಸಬೇಕಾಗಿ ತುಮಕೂರು ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ 2 ದಿನಗಳು ಕಳೆದ ನಂತರ ಪಾವಗಡ ತಾಲ್ಲೂಕು ಪಂಚಾಯಿತಿ ಕಾರ್ಯಾಲಯದ (ಎ.ಡಿ.) ಸಹಾಯಕ ನಿರ್ದೇಶಕರಾದ ಮಾರುತಿ ಪ್ರಸಾದ್ ಎಂಬುವರು ಮತ್ತು ಕೊಡಮೊಡಗು ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ಪಿಡಿಓ ದಾದಲೂರಿ ಎಂಬುವರು ಕಡಮಲಕುಂಟೆ ಗ್ರಾಮಕ್ಕೆ ಹಾಜರಾಗಿ ಸಮಸ್ಯೆಗಳು ಗಮನಕ್ಕೆ ಪಡೆದುಕೊಂಡಿರುತ್ತಾರೆ. ಇದೇ ಸಂದರ್ಭದಲ್ಲಿ (ಎ.ಡಿ) ಸಹಾಯಕ ನಿರ್ದೇಶಕರಾದ ಮಾರುತಿ ಪ್ರಸಾದ್ ಎಂಬುವರು ಮಾತನಾಡಿ, ಕುಡಿಯುವ ನೀರು ಮತ್ತು ಒಳಚರಂಡಿ ವ್ಯವಸ್ಥೆ ಇಲ್ಲವೆಂದು ಜನ ಸಂಪರ್ಕ ಕಾರ್ಯಕ್ರಮದಲ್ಲಿ ಮಾನ್ಯ ತುಮಕೂರು ಜಿಲ್ಲಾಧಿಕಾರಿಗಳಿಗೆ ಗೋವಿಂದಪ್ಪ ಎನ್ ಎಂಬ ವ್ಯಕ್ತಿ ದೂರು ನೀಡಿರುವ ವಿಷಯಕ್ಕೆ ಸಂಬಂಧಿಸಿದಂತೆ ನಾನು ಮತ್ತು ನಮ್ಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಹಾಗೂ ತಾಂತ್ರಿಕ ಸಿಬ್ಬಂದಿ ಭೇಟಿ ನೀಡಿ ಪರಿಶೀಲಿಸಲಾಗಿದ್ದು ಸದರಿ ಏನು ಚರಂಡಿ ವ್ಯವಸ್ಥೆ ಮಾಡಲಿಕ್ಕೆ 15ನೇ ಹಣಕಾಸು ಯೋಜನೆ ಕೊರತೆ ಇರುವುದರಿಂದ



2026/2027 ನೇ ಸಾಲಿನ ನರೇಗಾ ಕ್ರಿಯಾ ಯೋಜನೆ ಅಡಿಯಲ್ಲಿ ಅಳವಡಿಸಿಕೊಂಡು ಕಾಮಗಾರಿಗಳನ್ನು ಕೈಗೆತ್ತುಗೊಂಡು ಗ್ರಾಮಸ್ಥರಿಗೆ ಅನುಕೂಲ ಮಾಡಲು ಈಗಾಗಲೇ ನಮ್ಮ ಪಿಡಿಓ ಅವರಿಗೂ ಮತ್ತು ತಾಂತ್ರಿಕ ಸಿಬ್ಬಂದಿಗೆ ಮೆಟಿರೇಷನ್ ಕೊಡಲಾಗಿದೆ, ಒಟ್ಟಿನಲ್ಲಿ ಕಾಮಗಾರಿ ಯಾಕ್ಷನ್ ಪ್ಲಾನ್ ಅಪ್ರೋಲ್ ಆದ ತಕ್ಷಣ ಇಮ್ಮೇಟಿಂಯಾಗಿ ಕಾಮಗಾರಿ ಕೈಗೆತ್ತಿಕೊಂಡು 6 ತಿಂಗಳು ಒಳಗೆ ಗ್ರಾಮಸ್ಥರಿಗೆ ಅನುಕೂಲ ಕಲ್ಪಿಸಿಕೊಡಲು ಕ್ರಮ ವಹಿಸಲಾಗುವುದು ಎಂದು ಹೇಳಿರುತ್ತಾರೆ. ಆದರೆ ಇಲ್ಲಿಗೆ 8 ತಿಂಗಳು ಕಳೆದರೂ ಸಹ ಕಾಮಗಾರಿ ಕೈಗೆತ್ತಿಕೊಂಡು ಕೆಲಸಗಳು ಮಾಡಿಸದೆ ಕಾಟಾಚಾರಕ್ಕಾಗಿ ಕಡಮಲಕುಂಟೆ ಗ್ರಾಮಕ್ಕೆ ಹಾಜರಾಗಿ ಹಿಂತಿರುಗಿರುತ್ತಾರೆ ಎನ್ನಲಾಗಿದೆ. ಇಷ್ಟಕ್ಕೂ ಹಳ್ಳಿಗಳಲ್ಲಿ ಎಸ್ಸಿ ಕಾಲೋನಿಗಳು ಅಭಿವೃದ್ಧಿ ಪಡಿಸಲು ಅಧಿಕಾರಿಗಳು ಯಾವ ಕಾರಣಾಂತರಗಳಿಂದ ಹಿಂದೆ ಸರಿಯುತ್ತಾರೆಂದು ಅರ್ಥವೇ ಆಗುತ್ತಿಲ್ಲ ದಯವಿಟ್ಟು ಸಂಬಂಧ ಪಟ್ಟಿರುವ ಮೇಲಾಧಿಕಾರಿಗಳಾದ ಮಾನ್ಯ ತುಮಕೂರು ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯತ್ ಕಾರ್ಯನಿರ್ವಹಣಾಧಿಕಾರಿಳು ಪಾವಗಡ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಗಳ ಮೇಲೆ ಮತ್ತು ಕೊಡಮೊಡಗು ಗ್ರಾಮಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳಾದ ದಾದಲೂರಿ ಎಂಬುವರ ಮೇಲೆ ಸೂಕ್ತ ಕ್ರಮ ಜರುಗಿಸಿ ಕಡಮಲಕುಂಟೆ ಗ್ರಾಮದಲ್ಲಿ ಎಸ್ಸಿ ಕಾಲೋನಿಯನ್ನು ಅಭಿವೃದ್ಧಿ ಪಡಿಸಬೇಕಾಗಿ ಸಮಾಜ ಸೇವಕರಾದ ಕಡಮಲಕುಂಟೆ ಗ್ರಾಮದ.ಗೋವಿಂದಪ್ಪ ಎನ್. ರಾಮು ಟಿ. ಮಾರುತಿ ಕೆ.ಎನ್. ಗುರುಮೂರ್ತಿ ಎನ್. ನರಸಿಂಹಮೂರ್ತಿ ಎನ್. ನಾಗೇಶ್ ಟಿ.ಪುರುಷೋತ್ತಮ್ ಡಿ. ನರೇಶ್ ಟಿ. ರಮೇಶ್. ಎಂಬುವರು ಒತ್ತಾಯಿಸಿದರು.

ಸೂರ್ಯ ಪ್ರಗತಿ ಕನ್ನಡ ದಿನ ಪತ್ರಿಕೆ

ಹಿರಿಯ ಜೀವಗಳಿಗೆ ಸೈಬರ್ ವಂಚನೆ ಕುರಿತು ಜಾಗೃತಿ

ಸೂರ್ಯಪ್ರಗತಿನ್ಯೂಸ್.ಕಾಂ

ತುಮಕೂರು: ನಗರದ ಎಸ್.ಎಸ್. ಪುರಂನಲ್ಲಿರುವ ವಾಸವಿ ದೇವಸ್ಥಾನದ ಸುಜ್ಞಾನ ಮಂದಿರದಲ್ಲಿ ಸೈಬರ್ ವಂಚನೆ ಕುರಿತು ಜಾಗೃತಿ ಮೂಡಿಸುವ ಸಲುವಾಗಿ ಹಿರಿಯ ಜೀವಗಳಿಗೆ ಸೈಬರ್ ರಕ್ಷೆ: ನಿಮ್ಮ ಮೊಬೈಲ್ ನಿಮ್ಮ ಆಪ್ತ ಸ್ನೇಹಿತನೋ.. ವಂಚಕರ ಬಲೆಯೋ ಎಂಬ ಕುರಿತು ಉಪನ್ಯಾಸ ಕಾರ್ಯಕ್ರಮವನ್ನು ಅ. 27 ರಂದು ಸಂಜೆ 7 ಗಂಟೆಗೆ ಏರ್ಪಡಿಸಲಾಗಿದೆ. ಜೀವಮಾನವಿಡೀ ಕಷ್ಟಪಟ್ಟು ದುಡಿದು, ನಿವೃತ್ತಿಯ ನೆಮ್ಮದಿಗಾಗಿ ಕೂಡಿಟ್ಟ ಹಣದ ಮೇಲೆ ಇತ್ತೀಚೆಗೆ ಸೈಬರ್ ವಂಚಕರ ಕಣ್ಣು ಬಿದ್ದಿದೆ. "ಪೊಲೀಸ್ ಸ್ಟೇಷನ್‌ನಿಂದ ಕರೆ ಮಾಡುತ್ತಿದ್ದೇವೆ", "ನಿಮ್ಮ ಮೇಲೆ



ಕೇಸ್ ಆಗಿದೆ", "ಕರೆಂಟ್ ಬಿಲ್ ಕಟ್ಟದಿದ್ದರೆ ಸಂಪರ್ಕ ಕಟ್ ಆಗುತ್ತದೆ" ಎಂಬ ಬೆದರಿಕೆ ಕರೆಗಳು ಮತ್ತು ಮಕ್ಕಳ ಧ್ವನಿಯಲ್ಲೇ ಬರುವ ನಕಲಿ ಸಂದೇಶಗಳು ಇಂದು ಅನೇಕ ಮುಗ್ಧ ಹಿರಿಯರ ನಿದ್ದೆಗೆಡಿಸುತ್ತಿವೆ.

ಇಂತಹ ಮೋಸದ ಜಾಲಗಳಿಗೆ ಹೆದರದೆ, ಕೇವಲ ಒಂದು ಅಪರಿಚಿತ ಕರೆ ಅಥವಾ ಒಟಿಪಿ ಹಂಚಿಕೆಯಿಂದ ನಿಮ್ಮ ಜೀವಮಾನದ ಉಳಿತಾಯ ಖಾಲಿಯಾಗದಂತೆ ಹೇಗೆ ಎಚ್ಚರ ವಹಿಸಬೇಕು ಎಂಬುದನ್ನು ತಿಳಿಸಿಕೊಡಲು ಈ ವಿಶೇಷ ಜಾಗೃತಿ ಉಪನ್ಯಾಸವನ್ನು ಹಮ್ಮಿಕೊಳ್ಳಲಾಗಿದೆ. ಸ್ಮಾರ್ಟ್‌ಫೋನ್ ಬಳಸುವಾಗ ಆತಂಕಪಡದೆ, ನಿಮ್ಮ ಬ್ಯಾಂಕ್ ಖಾತೆ ಮತ್ತು ವೈಯಕ್ತಿಕ ವಿವರಗಳನ್ನು ಸುಲಭವಾಗಿ ರಕ್ಷಿಸಿಕೊಳ್ಳುವ ಸರಳ ಸೂತ್ರಗಳನ್ನು ಇಲ್ಲಿ ಕಲಿಸಿಕೊಡಲಾಗುತ್ತದೆ. ಲೇಖಕ ಹಾಗೂ ಅಂಕಣಕಾರ ಸಾಗರ್ ಹೆಚ್. ಪಿ. ಅವರು ಈ ಉಪನ್ಯಾಸ ಕೊಡಲಿದ್ದಾರೆ.

ಈ ಉಪನ್ಯಾಸ ಕಾರ್ಯಕ್ರಮದಲ್ಲಿ ಹಿರಿಯ ನಾಗರಿಕರು, ಯುವಕರು ತಪ್ಪದೇ ಭಾಗವಹಿಸಿ ಇದರ ಪ್ರಯೋಜನ ಪಡೆಯುವಂತೆ ಮನವಿ ಮಾಡಲಾಗಿದೆ.

ಹಾಡಹಗಲೇ ದ್ವಿಚಕ್ರ ವಾಹನ ಕಳ್ಳತನ: ಸಿಸಿಟಿವಿಯಲ್ಲಿ ಕಳ್ಳನ ಚಲನವಲನ ಸೆರೆ!

ಸೂರ್ಯಪ್ರಗತಿನ್ಯೂಸ್.ಕಾಂ

ಗುಬ್ಬಿ: ಪಟ್ಟಣದಲ್ಲಿ ಹಾಡಹಗಲೇ ದ್ವಿಚಕ್ರವಾಹನ ಕಳ್ಳತನವಾಗಿರುವ ಘಟನೆ ಬೆಳಕಿಗೆ ಬಂದಿದೆ. ರಸ್ತೆ ಬದಿಯಲ್ಲಿ ನಿಲ್ಲಿಸಿದ್ದ ಬೈಕ್‌ನ ಬೀಗ ಮುರಿದು, ಕ್ಷಣಾರ್ಧದಲ್ಲಿ ವಾಹನವನ್ನು ಕದ್ದೊಯ್ದಿರುವ ದೃಶ್ಯಗಳು ಸಮೀಪದ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿವೆ.

ಗುಬ್ಬಿ ಪಟ್ಟಣದ ಬಸ್ ನಿಲ್ದಾಣದ ಪಕ್ಕದಲ್ಲಿರುವ ಜನನಿಬಿಡ ರಸ್ತೆಯಲ್ಲಿ ಈ ಘಟನೆ ನಡೆದಿದೆ. ಕೆಲಸದ ನಿಮಿತ್ತ ಬೈಕ್ ನಿಲ್ಲಿಸಿ ಬಸ್ ನಿಲ್ದಾಣಕ್ಕೆ ತೆರಳಿದ್ದ ಮಾಲೀಕ, ಸುಮಾರು ಅರ್ಧ ಗಂಟೆಯ ಬಳಿಕ ವಾಪಸ್ ಬಂದು ನೋಡಿದಾಗ ಬೈಕ್ ಕಾಣೆಯಾಗಿತ್ತು. ಇದರಿಂದ ಬೈಕ್ ಮಾಲೀಕ ಆಘಾತಕ್ಕೊಳಗಾಗಿದ್ದಾರೆ.

ಪಟ್ಟಣದ ಕಾಯಿಪೇಟೆ ನಿವಾಸಿ ವಸಂತ ಕುಮಾರ್ ಅವರಿಗೆ ಸೇರಿದ ದ್ವಿಚಕ್ರ ವಾಹನ ಕಳ್ಳತನವಾಗಿದೆ ಎಂದು ತಿಳಿದುಬಂದಿದೆ. ಬಸ್



ನಿಲ್ದಾಣದ ಪಕ್ಕದಲ್ಲಿರುವ ಅರಳಿಮರ ಹೋಟೆಲ್ ಸಂಪರ್ಕ ರಸ್ತೆಯಲ್ಲಿ ಬೈಕ್ ನಿಲ್ಲಿಸಿ ತೆರಳಿದ್ದ ಸಂದರ್ಭದಲ್ಲಿ ಕಳ್ಳನು ಕೈಚಳಕ ತೋರಿಸಿದ್ದಾನೆ ಎನ್ನಲಾಗಿದೆ. ಈ ಕೃತ್ಯದ ದೃಶ್ಯಗಳು ಅಕ್ಕಪಕ್ಕದ ರಸ್ತೆಗಳ ಸಿಸಿಟಿವಿ ಕ್ಯಾಮೆರಾಗಳಲ್ಲಿ ಸೆರೆಯಾಗಿವೆ. ಜನನಿಬಿಡ ಪ್ರದೇಶದಲ್ಲೇ ಹಾಡಹಗಲೇ ಬೈಕ್ ಕಳ್ಳತನವಾಗಿರುವುದು ಸಾರ್ವಜನಿಕರಲ್ಲಿ ಆತಂಕ ಮೂಡಿಸಿದೆ. ಪಟ್ಟಣದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಪೊಲೀಸರು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು. ಸಿಸಿಟಿವಿ ದೃಶ್ಯಾವಳಿಗಳ ಆಧಾರದ ಮೇಲೆ ಆರೋಪಿಯನ್ನು ಪತ್ತೆಹಚ್ಚಿ, ಕಳುವಾದ ವಾಹನವನ್ನು ವಶಪಡಿಸಿ ಕೊಳ್ಳಬೇಕು ಎಂದು ಸಾರ್ವಜನಿಕರು ಆಗ್ರಹಿಸಿದ್ದಾರೆ.

ದೂರು ದಾಖಲಿಸಲು ವಿಳಂಬ ಆರೋಪ ನಿವೃತ್ತ ಪಿಎಸ್‌ಐ ಶಿಫಾರಸಿನ ಬಳಿಕ ದೂರು ದಾಖಲು! ದ್ವಿಚಕ್ರ ವಾಹನ ಕಳೆದು ಕೊಂಡ ವಸಂತ ಕುಮಾರ್ ಅವರು ದೂರು ನೀಡಲು ಗುಬ್ಬಿ ಪೊಲೀಸ್ ಠಾಣೆಗೆ ತೆರಳಿದಾಗ, ಪಿಎಸ್‌ಐ ಇಲ್ಲ ಎಂಬ ಕಾರಣ ನೀಡಿ ದೂರು ದಾಖಲಿಸುವಲ್ಲಿ ವಿಳಂಬ ಮಾಡಲಾಗಿದೆ ಎಂದು ಆರೋಪಿಸಲಾಗಿದೆ. ಬೆಂಗಳೂರಿಗೆ ತೆರಳಬೇಕಿದ್ದ ವಸಂತ ಕುಮಾರ್ ಅವರಿಗೆ ಈ ವಿಳಂಬದಿಂದ ತೊಂದರೆಯಾಗಿದೆ ಎನ್ನಲಾಗಿದೆ. ಬಳಿಕ ಅವರ ಸಂಬಂಧಿಕರಾಗಿರುವ ನಿವೃತ್ತ ಪಿಎಸ್‌ಐ ಒಬ್ಬರು ದೂರವಾಣಿ ಮೂಲಕ ಪೊಲೀಸ್ ಠಾಣೆಯನ್ನು ಸಂಪರ್ಕಿಸಿದ ನಂತರ ದೂರು ದಾಖಲಿಸಿ ಕೊಳ್ಳಲಾಗಿದೆ ಎಂದು ತಿಳಿದುಬಂದಿದೆ.

ದೂರು ನೀಡಲು ಬರುವ ಸಾರ್ವಜನಿಕರಿಗೆ ಸಕಾಲದಲ್ಲಿ ಸ್ಪಂದಿಸಬೇಕು ಎಂಬುದು ಸಾರ್ವಜನಿಕರ ನಿರೀಕ್ಷೆಯಾಗಿದೆ. ದೂರು ಸ್ವೀಕರಿಸುವಲ್ಲಿ ವಿಳಂಬವಾಗಿದೆ ಎಂಬ ಆರೋಪವು ಸಾರ್ವಜನಿಕ ವಲಯದಲ್ಲಿ ಚರ್ಚೆಗೆ ಕಾರಣವಾಗಿದೆ. ಈ ಕುರಿತು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ, ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ನಡೆಯದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

EDITOR: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRINTED BY: T.S.KRISHNAMURTHY, ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. OWNED BY: RAVI KUMAR.C.H, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA PRNTED AT: ANJANADRI PRINTERS, 4th CROSS, VINAYAKANAGARA, TUMAKURU-572101. KARNATAKA, PUBLISHED AT: TUMAKURU, CHIMPUGANAHALLI (VILLEGE), KODALAHALLI (POST), KORATGERE TALUK - 572121, TUMAKURU DISTRICT, KARNATAKA. GMAIL: suryapragathi2021@gmail.com.